ಶ್ರೀ ಬಿ. ಡಿ. ಜತ್ತಿ.—ಐದು ರೂಪಾಯಿ ಹೆಚ್ಚು ಕೊಟ್ಟಿದ್ದು ರೈತರಿಂದ ಸಬ್ಸಿಡಿ ತೆಗೆದುಕೊಂಡು ನಿರ್ಣಯ ಮಾಡಿದ್ದಾರೆ. ಅದರ ಪ್ರಕಾರ 52 ರೂಪಾಯಿ ಇದ್ದರೂ 57 ರೂಪಾಯಿ ಮಾಡಿದ್ದೇವೆ. ಮೈಸೂರು ಸ್ಟೇಟ್‌ನಲ್ಲಿ ಮಾರಾಟ ಮಾಡುವ ಕಾಲಕ್ಕೆ ದರ ಎಲ್ಲವೂ ಒಂದೇ ತರಹ ಇರುತ್ತದೆ ಎಂದು ಹೇಳಿದ್ದೇನೆ. ಮತ್ತು ಪತ್ರಿಕೆಯಲ್ಲಿ ಪ್ರಕಟಣೆ ಮಾಡುವ ವಿಷಯ ತಮ್ಮ ಎಡಗಡೆ ಕುಳಿತಿರುವವರಿಗೆ ಹೇಳಿದರೆ ಅವರೇ ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮದರಾಸ್‌ನಲ್ಲಿ ಹೋಟೆಲುಗಳಲ್ಲಿ ಇಡ್ಲಿ, ದೋಸೆ ಇವುಗಳನ್ನು ಕಡಿಮೆ ರೇಟಿನಲ್ಲಿ ಮಾರುತ್ತಾ ಇದ್ದಾರೆ, ನಮ್ಮ ರಾಜ್ಯದಲ್ಲೂ ಕೂಡ ಹೋಟೆಲುಗಳಿಗೆ ಸಾಕಾದಷ್ಟು ಆಹಾರ ಸಾಮಗ್ರಿಗಳನ್ನು ಕೊಡುತ್ತಾ ಇದ್ದೀರಿ, ಈಗಲಾದರೂ ಬೆಲೆ ನಿಗದಿ ಮಾಡಿ ಕಡಿಮೆ ದರದಲ್ಲಿ ತಿಂಡಿ ತಿನಸುಗಳನ್ನು ಹೋಟೆಲುಗಳಲ್ಲಿ ಮಾರಾಟ ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಹೋಟೆಲ್‌ನವರಿಗೆ ಬೇಕಾಗುವ ಎಲ್ಲಾ ಪಥಾರ್ಥಗಳನ್ನೂ ಕಂಟ್ರೋಲ್ ದರದಲ್ಲಿ ಪೂರೈಸಿದರೆ ಕಂಟ್ರೋಲ್ ದರದಲ್ಲಿ ಮಾರಾಟ ಮಾಡಿರಿ ಎಂದು ಹೇಳಲಿಕ್ಕೆ ಅವಕಾಶವಾಗುತ್ತದೆ. ಆ ರೀತಿ ಆಹಾರ ಪದಾರ್ಥಗಳನ್ನು ಪೂರೈಸದಿದ್ದರೆ ಆ ರೀತಿ ಒತ್ತಾಯ ಮಾಡುವುದಕ್ಕೆ ಕಾನೂನು ಪ್ರಕಾರ ಬರುವುದೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಲೆವಿ ಸಿಸ್ಟಂ ಮೇಲೆ ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕೆ ಏನು ಅಡ್ಡಿ ಆತಂಕ ಇವೆ? ಎರಡನೆಯದಾಗಿ ಬೆಂಗಳೂರು ನಗರದಲ್ಲಿ 8 ಕೆ. ಜಿ. ಕೊಡುತ್ತೇವೆ ಎಂದು ಹೇಳುತ್ತೀರಿ, 8 ಕೆ. ಜಿ. ಸಿಕ್ಕುತ್ತಿಲ್ಲ, 3 ಕೆ. ಜಿ. ಕೂಡ ಸೊಸೈಟಿ ಮತ್ತು ಇತರ ಕಡೆಗಳಲ್ಲಿ ಸಿಕ್ಕುತ್ತಿಲ್ಲ ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಮನಾಪಲಿ ಪ್ರೊಕ್ಯೂರ್‌ಮೆಂಟ್ ಪದ್ಧತಿಯನ್ನು ಇದುವರೆಗೂ ಒಪ್ಪಿಲ್ಲ ಮುಂದೆ ಒಪ್ಪಬಹುದು. ಅದು ಮುಂದಿನ ವಿಚಾರ, ಏಪ್ರಿಲ್ 8 ನೇ ತಾರೀಖಿನ ನಂತರ ಹೇಳಬಹುದು. ಎರಡನೆಯದು ಬೆಂಗಳೂರಿನಲ್ಲಿ 8 ಕೆ. ಜಿ. ಕೊಡುವುದು 3 ಕೆ. ಜಿ. ಗೋಧಿ, 3 ಕೆ. ಜಿ. ಅಕ್ಕಿ, 2 ಕೆ. ಜಿ. ಜೋಳ ಅಥವಾ ಇನ್ನಾವುದಾದರೂ ಧಾನ್ಯ, ಅದರಂತೆ ಕೊಡುತ್ತಾ ಬಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಕಡೆ ಅದೂ ಕೂಡ ಸಿಕ್ಕುತ್ತಿಲ್ಲ.

ಶ್ರೀ ಬಿ. ಡಿ. ಜತ್ತಿ.—ಮಿನಿಸ್ಟ್ರಿ ಫಾರ್ಮೇಷನ್ ಮಾಡುವುದಕ್ಕೆ 5-6 ದಿನ ನಿಧಾನವಾದ ಕಾಲದಲ್ಲಿ ಆಹಾರಧಾನ್ಯ ಹಂಚಿಕೆ ಮಾಡುವ ಕೆಲಸದಲ್ಲಿ ಸ್ವಲ್ಪ ವ್ಯತ್ಯಾಸವಾಗಿತ್ತು. ಅನಂತರ ಅದನ್ನು ಸರಿಪಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮುಖ್ಯವಾಗಿ ಬೆಂಗಳೂರು ನಗರದಲ್ಲಿರತಕ್ಕ ಕಂಟ್ರೋಲ್ ಸಾಮಾನುಗಳನ್ನು ಮಾರಾಟ ಮಾಡತಕ್ಕ ನ್ಯಾಯ ಬೆಲೆಯ ಅಂಗಡಿಗಳಲ್ಲಿ ನೂರಕ್ಕೆ 90 ರಷ್ಟು ಆಹಾರಧಾನ್ಯಗಳನ್ನು ಬ್ಲ್ಯಾಕ್‌ಮಾರ್ಕೆಟ್ ಅಂದರೆ ಕಳ್ಳಸಂತೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಪ್ಪಿಸುವ ಸಲುವಾಗಿ ಸರ್ಕಾರದವರೇ ಏಕೆ ಅಂಗಡಿಗಳನ್ನು ತೆಗೆದು ಧಾನ್ಯಗಳನ್ನು ಮಾರಾಟ ಮಾಡಬಾರದು, ಅದಕ್ಕೆ ತೊಂದರೆಯೇನಿದೆ?

10-30 A.M.

ಶ್ರೀ ಬಿ. ಡಿ. ಜತ್ತಿ.—ನೂರಕ್ಕೆ 90 ರಷ್ಟು ಸೊಸೈಟಿಗಳು ಕಾಳಸಂತೆಯಲ್ಲಿ ಧಾನ್ಯವನ್ನು ಮಾರಾಟ ಮಾಡುತ್ತಿವೆಯೆಂದು ಇವರು ಹೇಳುತ್ತಿರುವುದು ಇದೇ ಮೊದಲನೆಯ ಸಲ. ಆದರೆ ಈ ಸಂಗತಿ ನಿಜಕ್ಕೆ ದೂರವಾದದ್ದು......

ಅಧ್ಯಕ್ಷರು.—ಇಲ್ಲಿ ಮಾನ್ಯ ಮಂತ್ರಿಗಳು ನಿಜಕ್ಕೆ ಅದು ದೂರವಾದದ್ದು ಎಂದು ಹೇಳುತ್ತಿದ್ದಾರೆ ಮಾನ್ಯ ಸದಸ್ಯರು ಸ್ವಲ್ಪ ಕುಳಿತುಕೊಳ್ಳಿ......

ಶ್ರೀ ಬಿ. ಡಿ. ಜತ್ತಿ.—ಅವರು ಹಾಗೆ ಹೇಳಿದ್ದು ಸರಿಯಿಲ್ಲ. ಅದು ಸತ್ಯಕ್ಕೆ ದೂರವಾದ್ದು ಅವರು ಹಾಗೆ ಎಲ್ಲಿ ನಡೆಯುತ್ತಿದೆ ಎಂಬುದನ್ನು ತಿಳಿಸಿದರೆ ಎರಡರಲ್ಲಿ ಒಂದು ತೀರ್ಮಾನವಾಗುವುದು. ಇಲ್ಲಿ ಅವರು ಹೇಳಿದ್ದು ಸರಿಯಾಗಬೇಕು, ಇಲ್ಲವೇ ನಾನು ಹೇಳಿದ್ದು ಸರಿಯಾಗಬೇಕು. ನಿರ್ದಿಷ್ಟವಾದ ವಿಚಾರಗಳಿಲ್ಲದಿದ್ದರೂ ಬರೀ ಊಹಾಪೋಗಳನ್ನು ಕಟ್ಟಿಕೊಂಡು ಉತ್ಪ್ರೇಕ್ಷೆಯಿಂದ ಅವರು ಮಾತನಾಡತಕ್ಕದ್ದು ನನಗೆ ಸರಿ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಬಂದರೆ ನಾನು ಅವರನ್ನು ಕರೆದು ಕೊಂಡು ಹೋಗಿ ಹಾಗೆಲ್ಲ ಲಂಚಗೂಳಿತ ನಡೆಯುತ್ತಿದೆ ಎಂಬುದನ್ನು ತೋರಿಸಿ ಕೊಡುತ್ತೇನೆ.. ...

(Sri VATAL NAGARAJ *repeatedly got up to put a question*)

Mr. SPEAKER.—The Hon'ble Member Sri Vatal Nagaraj should know the rules of procedure; it is not a private conversation. If he comes to my chamber I will give him greater latitude. On the floor of the House I can make no distinction between member and member.

Sri DIGAMBAR RAO BALWANT RAO (Aland).—Does the Hon'ble Minister know that in Gulbarga ration is given at the rate of 4 Kg. and not 5 Kg.

Sri B. D. JATTI.—There may be one or two instances depending upon the availability of foodgrains. At a particular given time, if they are given 4 Kg. on another occasion they are given 6 Kg. to make it up.

Sri L. SRIKANTAIAH (Nanjangud).—The emergency is now ending and when it ends I doubt very much whether the Essential Commodities Act can be implemented without invoking the aid of the Defence of India Rules. I want to know from the Hon'ble Minister what ways and means have been thought of already to implement the provisions of the Essential Commodities Act after the lapse of the emergency in the country?

Sri B. D. JATTI.—The orders issued are not under the Defence of India Rules; they are under the Essential Commodities Act. All the orders are liable to be questioned in a court of law. So, there should not be any objection from any member.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಬೆಂಗಳೂರಿನಲ್ಲಿ ರೇಷನ್ ಸಾಮಾನುಗಳನ್ನು ಮಾರಾಟ ಮಾಡತಕ್ಕ ಅನೇಕ ಅಂಗಡಿಗಳಲ್ಲಿ ನಾನ್ ರೇಷನ್ ಅಕ್ಕಿಯನ್ನೂ ಸಹಾ ಇಟ್ಟು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ಕೆಲವು ವೇಳೆ ರೇಷನ್ ಕಾರ್ಡುಗಳಿಗೆ ಕೊಡತಕ್ಕ ಒಳ್ಳೆಯ ಅಕ್ಕಿಬಂದಾಗ ಅದನ್ನು ಅವರಲ್ಲಿರತಕ್ಕ ಕೆಳಪೆ ದರ್ಜೆಯ ನಾನ್ ರೇಷನ್ ಅಕ್ಕಿಗೆ ಬದಲಾಯಿಸಿ ಕೊಡುತ್ತಿರುವುದರಿಂದ ಕಾರ್ಡ್‌ಹೋಲ್ಡರುಗಳಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೇನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಆ ವಿಚಾರವನ್ನು ನನ್ನ ಗಮನಕ್ಕೂ ತಂದಿದ್ದಾರೆ, ಎಗ್ಸಾಮಿನ್ ಮಾಡಿಸುತ್ತಿದ್ದೇನೆ.

Sri B. M. PATIL (Bijapur).—Will the Hon'ble Minister please furnish the estimated quantities of paddy and jowar procured last year and the actual quantity procured; what is the performance of the Food Department last year and this year and what is the expected central assistance during the last two years?

Sri B. D. JATTI—These require a datailed debate; I cannot reply in one or two sentences.

Sri M. Y. GHORPADE (Sandur).—What was the performance of levy last year in March and what is the actual performance of levy in March this year; what was the total central assistance we received last year and how much do we expect to receive this year; has the free market price gone below the procurement price at any time during the last two years?

Sri B. D. JATTI.—The quantities of foodgrains procured in Mysore State during 1964-65: paddy–1,30,000 tons; jowar—30,000 tons. In 1965-66 the procurement was: paddy—1,24,740; jowar—49,391; maize 154 tons and local wheat—2 tons. Prospective procurement for 1966-67: paddy--1,50,000 tons; jowar—80,000 tons; ragi—40,000 tons and bajra—20,000 tons. It is possible to procure as much as is estimated for 1966-67. Last year, we could not procure the estimated quantity; we got about 60 to 70 per cent of what we estimated. The open market price has not gone below the procurement price at any time.

Mr. SPEAKER.—Members may kindly give me points and they will be passed on to the Minister and they will be replied.

Sri M. Y. GHORPADE.—What is the central assistance we got last year and how much do we expect to get this year?

Sri B. D. JATTI.—We are going to get the information on 8th of April. Then I will be in a position to tell exactly what quantites of foodgrains we are likely to get from the Government of India either from the quota received from foreign countries or from other States.

The target last year was 2½ lakh tons and we have procured 50% We could not procure according to the estimates last year.

Mr. SPEAKER.—The matter is a very important one We have to get up at 12 noon or 12-30 P.M. and by then the reply must be over. The amendments have to be put to vote. I mentioned a little earlier that every amendment may be put to vote. I called Sri Sivappa, Sri N. Hutchmasthy Gowda and a few other friends and we looked into the proceedings of last year in this behalf. What was done last year was that all the amendments of one member were put in one block instead of putting them separately; that course will be adopted.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಫುಡ್ ವಿಚಾರದಲ್ಲಿ ತಮಗೆ ಒಂದು ಸಲಹೆ ಮಾಡಬೇಕೆಂದಿದ್ದೇನೆ: ಇದು ಬಹಳ ಪ್ರಾಮುಖ್ಯವಾದ ವಿಚಾರ. ಅನೇಕರು ಮಾನ್ಯ ಮಂತ್ರಿಗಳಿಂದ ಇನ್ನೂ ಕೆಲವು ಪ್ರಾಮುಖ್ಯವಾದ ವಿವರಣೆಗಳನ್ನು ಕೇಳಬೇಕಾದ್ದಿದೆ. ಅದಕ್ಕೆ ತಾವು ಇನ್ನೂ ಸ್ವಲ್ಪ ಕಾಲಾವಕಾಶವನ್ನು ಕೊಡಬೇಕಾಗಿದೆ.

ಅಧ್ಯಕ್ಷರು.—ತಾವು ಇಂಥ ವಿಚಾರಗಳನ್ನೆಲ್ಲಾ ನಿಮ್ಮ ಲೀಡರ್ ಹತ್ತಿರಹೋಗಿ ಮುಂಚಿತವಾಗಿ ಮಾತನಾಡಬೇಕು. ಹಾಗೆ ಮಾಡದೆ ತಾವು ಇಲ್ಲಿ ಬಂದು ಏಕಾಏಕಿ ಹೀಗೆ ಕಾಲಾವಕಾಶಬೇಕು ಎಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಹೀಗೆ ಮಾಡಿದರೆ ನನಗೆ ಇಲ್ಲಿ ಬಹಳ ಇಕ್ಕಟ್ಟಾಗುತ್ತದೆ. ನೀವು ತಿಳಿಸತಕ್ಕದ್ದು ಏನಿದ್ದರೂ ಅದನ್ನು ನಿಮ್ಮ ಮುಂಖಂಡರ ಮೂಲಕ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಸಂಬಂಧಪಟ್ಟ ಮಂತ್ರಿಗಳು ......

Mr. SPEAKER.—I have heard the Hon'ble Member. He should not think that he is the only member; I am finding several members who are desirous. Considering that I suggest that if members are desirous, they may pass on their points on slips; I will pass them on and in the meantime the Minister will get ready with the reply and thus there will be maximum utilization of the available time. If I am not able to find time, I would request the Minister to give the informatian some time in the evening when we discuss the supplementary demands because this is a very important matter. I am trying to help the members as much as possible. Otherwise I could have asked them to send interpellations.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಸ್ವಾಮೀ ಸಭಾಧ್ಯಕ್ಷರೇ, ಸುಮಾರು ಆರು ದಿನಗಳಿಂದ ನಡೆದಿರತಕ್ಕ ಚರ್ಚೆಯನ್ನು ನಾವು ಕೇಳಿದ್ದೇವೆ. ಅದು ಬಹಳ ಗಹನವು ಹಾಗೂ ಉಪಯುಕ್ತವೂ ಆಗಿದೆ. ಚುನಾವಣೆಯಾದಮೇಲೆ ಅನೇಕ ಜನ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಮೆಚ್ಚಬೇಕು ಎಂದು ನನಗನಿಸುತ್ತದೆ. ಹಾಗೂ ಅವರು ಕೊಟ್ಟಿರತಕ್ಕ ಅನೇಕ ಸಲಹೆಗಳು ಸಾಧುವಾದುದು ಮತ್ತು ಒಪ್ಪತಕ್ಕದ್ದು ಇದೆ, ಮತ್ತು ಆಲೋಚನೆ ಮಾಡತಕ್ಕಂತಹವು ಇವೆ. ಅದರಲ್ಲೂ ಹೊಸದಾಗಿ ಬಂಧಿರತಕ್ಕ ಅನೇಕ ಸದಸ್ಯರುಗಳು ಬಹಳ ಉತ್ಸಾಹದಿಂದ ಹಾಗೂ ಅವೇಶದಿಂದಲೂ ಮಾತನಾಡಿದ್ದಾರೆ. ಅವರು ಹಾಗೆ ಮಾತನಾಡುವಾಗ ಬಹಳ ಉದ್ವೇಗದಿಂದ ಸಲಹೆಗಳನ್ನು ಮಾಡಿದ್ದಾರೆ. ಇದಕ್ಕಾಗಿ ನಾನು ಅವರೆಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಚುನಾವಣೆ ಈಗತಾನೇ ಮುಗಿದಿದೆ. ಅವೇಶದಿಂದ ಇಲ್ಲೂ ಕೂಡ ಹೆಚ್ಚು ಕಡಿಮೆ ಬಂದಿರತಕ್ಕ ಸದಸ್ಯರು ಆ ರೀತಿ ಮಾತನಾಡಿದ್ದಾರೆ. ಇದನ್ನು ಸ್ವಾಗತಿಸುತ್ತೇನೆ. ಮತ್ತೆ ಇಲ್ಲಿ ಮಾತಾಡುವಾಗ ಹಳಬರೂ ಇದ್ದಾರೆ, ಅವರೂ ಮಾತಾಡಿದ್ದಾರೆ. ಆದರೆ ಅವರ

ಮಾತು ಬಹಳ ಕಟುವಾಗಿರುತ್ತದೆ. ಅದನ್ನೂ ಸ್ವಲ್ಪ ಒಪ್ಪತಕ್ಕದ್ದೇ. ಅಲ್ಲದೆ ಅವರು ಒಪ್ಪದೆ ಇರತಕ್ಕ ಮಾತುಗಳನ್ನು ಹಾಗೂ ಒಪ್ಪತಕ್ಕ ಮಾತುಗಳನ್ನೂ ಆಡಿದ್ದಾರೆ. ಅದರೂ ನಾವು ಇಂದು ಎದುರಿಸತಕ್ಕ ಒಂದು ದೊಡ್ಡ ಸಮಸ್ಯೆ ಎಂದರೆ, ಅದು ಆಹಾರದ ಸಮಸ್ಯೆ ಎಂದು ಹೇಳಲು ಇಷ್ಟಪಡುತ್ತೇನೆ. ಇದನ್ನು ನಮ್ಮ ಕಡೆಯ ಜನರೂ ಹೇಳಿದ್ದಾರೆ ಹಾಗೂ ವಿರೋಧ ಪಕ್ಷದವರೂ ಹೇಳಿದ್ದಾರೆ. ಮೈಸೂರಿಗೆ ಸಾಧಾರಣವಾಗಿ ಬಹುತೇಕವಾಗಿ ಈ ಅಹಾರದ ಅಭಾವ ಇದೆ ಹಾಗೂ ಜನಸಂಖ್ಯೆ ಇರುವ ಪ್ರಮಾಣವು ಮತ್ತು ಇದರ ತಾರತಮ್ಯವು ನಮ್ಮ ಮೈಸೂರಿನಲ್ಲಿದೆ ಎನ್ನುವುದನ್ನು ಒಂದು ದೃಷ್ಟಿಯಿಂದ ಒಪ್ಪಬಹುದು. ಕೆಲವು ರಾಜ್ಯಗಳಲ್ಲಿ ಲೋಕ ಸಭೆಗೆ ಹೋಗುವ ಸದಸ್ಯರ ಸಂಖ್ಯೆ ಒಂದೆರಡು ಕಡಿಮೆಯಾದರೂ ನಮ್ಮ ರಾಜ್ಯದಲ್ಲಿ ಲೋಕ ಸಭೆಯ ಸದಸ್ಯರ ಸಂಖೆ ಜಾಸ್ತಿಯಾಗಿದೆ. ಇದಕ್ಕೆ ಕಾರಣ ಸ್ವಲ್ಪ ಜನಸಂಖ್ಯೆ ಹೆಚ್ಚು ಆದುದು. ಆದುದರಿಂದ ಇದು ಬಹಳ ದೊಡ್ಡ ಪಶ್ನೆ. ಈ ಪ್ರಶ್ನೆಯನ್ನು ಬಗೆಹರಿಸಬೇಕಾದರೆ ಏನು ಕಾರ್ಯಕ್ರಮಗಳನ್ನು ಮಾಡಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಮತ್ತು ಯೋಗ್ಯವಾದ ರೀತಿಯಲ್ಲೂ ಸೂಚಿಸಿದ್ದಾರೆ. ಹಾಗೂ ನಮಗೆ ಇವೊತ್ತು ಕೊರತೆ ಇರತಕ್ಕದ್ದು ಅಕ್ಕಿ ಹಾಗೂ ಭತ್ತದಲ್ಲಿ. ಇದನ್ನು ಬಹುಶಃ ನೀಗಬೇಕಾದರೆ, ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಹೇಗಾದರೂ ಮಾಡಿ ವ್ಯವಸಾಯದಿಂದಲೇ ಸಾಕಷ್ಟು ಹೆಚ್ಚು ಉತ್ಪತ್ತಿ ಬರುವಂತೆ ಮಾಡಿ ಆಹಾರದ ಕೊರತೆಯನ್ನು ನೀಗಿಸಬೇಕು. ಅಲ್ಲದೆ ಇದಕ್ಕೆ ಅನೇಕ ರೀತಿಯ ಕೆಲಸಗಳನ್ನು ಮಾಡುವ ಕಾಲ ಬಂದಿದೆ. ಮೊದಲನೆಯದಾಗಿ ವ್ಯವಸಾಯದ ಉದ್ಯಮವನ್ನು ಸಮರ್ಪಕವಾಗಿ ಏರ್ಪಾಡು ಮಾಡಬೇಕು. ಇದು ಆಗಬೇಕಾದರೆ ಮೈಸೂರಿನ ಹಿತದೃಷ್ಟಿಯಿಂದ ನೀರಾವರಿಯನ್ನು ಜಾಸ್ತಿ ಮಾಡುವುದು ಅವಶ್ಯಕವಾಗಿದೆ. ಒಂದು ದುರ್ದೈವವೋ ಏನೋ, ಬಹುಶಃ ನಮ್ಮ ಮೈಸೂರಿನಲ್ಲಿರುವ ಎಲ್ಲ ಕೆರೆಗಳಿಂದಲೂ ಹೆಚ್ಚು ಸಾಗುವಳಿಯಾಗುತ್ತಿದೆ ಎನ್ನುವ ವಾದ ಕೇಳಿಬರುತಿದೆ. ನಮ್ಮಲ್ಲಿ ಸುಮಾರು 34 ಸಾವಿರ ಕೆರೆಗಳು ಇರಬಹುದು. ಇವೆಲ್ಲವುಗಳಿಂದಲೂ ಬೇಕಾದಷ್ಟು ನೀರಾವರಿಯಾಗುತ್ತದೆ ಎಂದು ಕೆಲವು ಕಡೆಗಳಲ್ಲಿ ಕೇಳಿಬರುತ್ತಿದೆ. ಅದೇ ರೀತಿ ಕೇಂದ್ರದಲ್ಲಿಯೂ ಒಂದು ಅಭಿಪ್ರಾಯ ಬಂದಿದೆ. ಸಣ್ಣ ಸಣ್ಣ ಕೆರೆಗಳಿಂದ ಸುಮಾರು ಒಂದು ಕೆರೆಯಲ್ಲಿ ಐದು ಎಕರೆಗಳಷ್ಟು ಸಾಗುವಳಿ ಮಾಡಬಹುದು ಎಂದರೆ ಸುಮಾರು ಎರಡು ಸಾವಿರ ಎಕರೆಯಷ್ಟು ಎಂದು ಬಂದರೆ ಸರಾಸರಿ ನೂರು ಎಕರೆಯಷ್ಟು ಬರುತ್ತದೆ ಎಂದು ಕಾಣುತ್ತದೆ. ಎಂದರೆ ಶೇಕಡ ಒಂದರಷ್ಟು ಹೆಚ್ಚಾಗಿರಬಹುದು. ಹಿಂದೆ ಶೇಕಡಾ ಸಾಗುವಳಿಯಾಗುತ್ತಿದ್ದ ಪ್ರದೇಶ ಶೇಕಡಾ ಆರುವರೆಯಷ್ಟು ಎಂದು ಇದ್ದುದು ಇವೊತ್ತು ಬಹುಶಃ ಶೇಕಡಾ ಏಳೂವರೆಯಷ್ಟು ಅಥವಾ ಶೇಕಡ ಎಂಟರಷ್ಟು ಇರಬಹುದು. ಎಂದರೆ ಸುಮಾರು ಮೂರು ಲಕ್ಷ ಎಕರೆಗಳಷ್ಟು ಜಾಸ್ತಿಯಾಗಬಹುದು. ಸಾಗು ಆಗಬೇಕಾದ ಜಮೀನಿನ ವಿಸ್ತೀರ್ಣ ನೋಡಿದರೆ ಸುಮಾರು ಮೂರು ಕೋಟಿ ಎಕರೆಗಳಷ್ಟು ಆಗಬಹುದು. ಇವುಗಳನ್ನೆಲ್ಲಾ ಸಾಗುವಳಿಗೆ ತರಬೇಕಾದರೆ ಸಾಕಷ್ಟು ನೀರಾವರಿ ಯೋಜನೆಗಳನ್ನು ಮಾಡದೇ ಇದ್ದರೆ ಇದನ್ನು ಪೂರೈಸಲು ಆಗುವುದಿಲ್ಲ. ಆದುದರಿಂದ ಇದನ್ನು ಕಾರ್ಯರೂಪಕ್ಕೆ ತರಲು ನಾಲ್ಕನೇ ಯೋಜನೆ ಮುಗಿಯುವುದರೊಳಗಾಗಿ ವ್ಯವಸಾಯದ ಉತ್ಪಾದನೆಯನ್ನು ಇನ್ನೂ ಜಾಸ್ತಿ ಮಾಡಬೇಕಾಗಿದೆ. ಇದನ್ನು ಹೇಗೆ ಮಾಡಬೇಕು ಎನ್ನುವುದರ ಬಗೆಗೆ ನಮ್ಮ ರಾಜ್ಯದ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರವರು ಆಗಲೇ ತಿಳಿಸಿದ್ದಾರೆ. ಅವರು ತಿಳಿಸಿದಂತೆ ಹಣದ ಕೊರತೆ ಬಹಳ ಜಾಸ್ತಿಯಾಗಿದೆ. ಮೊನ್ನೆಯ ದಿನ ಕೇಂದ್ರದ ಅರ್ಥ ಮಂತ್ರಿಗಳು ಮಾಡಿದ ಭಾಷಣವನ್ನು ಕೇಳಿದ್ದೇವೆ. ಆದ್ದರಿಂದ ನಮಗೆ ಹಣದ ಕೊರತೆ ಎಷ್ಟಿದೆ ಎನ್ನುವುದು ಗೊತ್ತಾಗಿದೆ. ಈ ಕೊರತೆ ನಿವಾರಣೆಯಾಗಬೇಕಾದರೆ ಇದಕ್ಕಾಗಿ ನಾವು ಹಣವನ್ನು ಕೇಳುತ್ತಿದ್ದೇವೆ. ಕೇಂದ್ರ ಸರಕಾರದವರು ಎಲ್ಲ ರಾಜ್ಯಗಳಿಗೂ ಹಣ ಕೊಡುವಂತೆ ನಮ್ಮ ಮೈಸೂರು ರಾಜ್ಯಕ್ಕೂ ಹಣ ಸಹಾಯ ಮಾಡುತ್ತಿದ್ದಾರೆ. ಆದರೆ ನಮ್ಮ ಮೈಸೂರು ರಾಜ್ಯ

(ಶ್ರೀ ಎಸ್. ನಿಜಲಿಂಗಪ್ಪ)

ದವರು ಕೇಂದ್ರದವರನ್ನು ನಮ್ಮ ರಾಜ್ಯದಲ್ಲಿ ಹತ್ತು ಕೋಟಿ ಹಾಗೂ ಇದಕ್ಕಿಂತ ಹೆಚ್ಚು ಖರ್ಚು ಬರುವ ನೀರಾವರಿ ಯೋಜನೆಗಳನ್ನು ಕೇಂದ್ರದವರೇ ವಹಿಸಿಕೊಂಡು ಮಾಡಬೇಕು ಇಲ್ಲವೇ ನಮ್ಮ ರಾಜ್ಯಕ್ಕೆ ಸಾಲವಾಗಿ ಹಣ ಕೊಟ್ಟು ಅದನ್ನು ಸುಲಭ ಕಂತಿನ ರೂಪದಲ್ಲಿ ಈ ಯೋಜನೆ ಪ್ರತಿಫಲ ಬಂದನಂತರ ಹಿಂತಿರುಗಿ ಕೊಡುವಂತೆ ಸಹಾಯ ಮಾಡಬೇಕೆಂದೂ ಹೇಳಿದ್ದೇವೆ. ಇದರ ಬಗ್ಗೆ ಇನ್ನೂ ಕೇಂದ್ರದವರು ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ ಮತ್ತು ಯಾವ ರೀತಿ ಇದನ್ನು ಬಗೆಹರಿಸಬೇಕೆಂಬ ಸೂಚನೆ ಅವರ ಮುಂದೆ ಇದೆ ಮತ್ತು ನಾವು ಕೂಡ ಪ್ಲಾನಿಂಗ್ ಕಮಿಷನ್ನಿನವರ ಮುಂದೆ ಹಾಗೂ ಮುಖ್ಯ ಮಂತ್ರಿಗಳ ಕಾನಫರೆನ್ಸ್‌ಗಳು ನಡೆದಾಗ ನಾವು ಹೇಳಿದಂತಹ ಈ ವಾದವನ್ನು ಬಹುತೇಕ ಎಲ್ಲಿ ರಾಜ್ಯದ ಇತರ ಮುಖ್ಯ ಮಂತ್ರಿಗಳೂ ಕೂಡ ಇದನ್ನು ಒಪ್ಪಬಹುದು ಎಂದೂ ಹೇಳಿದ್ದರು. ಆದರೆ ಇದರ ಬಗ್ಗೆ ಕೇಂದ್ರದವರು ಯಾವ ತೀರ್ಮಾನಕ್ಕೂ ಬಂದಿಲ್ಲ. ಆದಷ್ಟು ತೀವ್ರವಾಗಿ ಬರಬೇಕೆಂದು ನಾವು ಕೇಂದ್ರದವರ ಮೇಲೆ ಒತ್ತಾಯವನ್ನೂ ಹಾಕಿದ್ದೇವೆ ಮತ್ತು ಅವರು ಒಪ್ಪಬಹುದು ಎಂದು ನಾನೂ ಅಪೇಕ್ಷೆ ಮಾಡುತ್ತೇನೆ. ಇನ್ನು ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಹೇಳಿದ್ದಾರೆ. ಅದರಲ್ಲೂ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಈ ಯೋಜನೆಗಳನ್ನು ಓದಿ ಓದಿ ಬಹಳ ಅಜೀರ್ಣವಾಗಿದ್ದಾರೆ ಎಂದು ನನಗನಿಸುತ್ತವೆ. ಅವರು ಹೇಳುವುದನ್ನೇನೋ ಹೇಳಿದರು, ಆದರೆ ಬಹಳ ಆವೇಶದಿಂದ ಜಾಸ್ತಿಯಾಗಿ ಹೇಳಿದ್ದಾರೆ. ಕೃಷ್ಣಾನದಿ ನೀರಿನ ವಿಚಾರವಾಗಿಯಾಗಲಿ ಅಥವಾ ದೊಡ್ಡ ಕಟ್ಟೆಗಳನ್ನು ಕಟ್ಟುವ ವಿಚಾರವಾಗಲಿ ಇದರ ಬಗ್ಗೆ ಹೇಳುವಾಗ ಮಾನ್ಯ ಸದಸ್ಯರಿಗೆ ಇಲ್ಲಿ ಒಂದು ಎಚ್ಚರಿಕೆಯ ಸೂಚನೆಯನ್ನು ಹೇಳಲು ಇಷ್ಟಪಡುತ್ತೇನೆ. ಹೀಗೆ ಹೇಳತಕ್ಕ ಸಂದರ್ಭದಲ್ಲಿ ಅನೇಕರು ಹೇಳಿದಂತೆ ಮದ್ರಾಸಿನೊಂದಿಗೆ ಆಗಿರುವ 1924 ನೇ ಇಸವಿಯ ಒಪ್ಪಂದದಂತೆ ಕಾವೇರಿ ನದಿಯಲ್ಲಿ ನಮಗೆ ನೀರೇ ಸಿಗುವುದಿಲ್ಲ. ಮುಂದೆ ಇದರಿಂದ ಕಷ್ಟವಾಗುತ್ತದೆ ಎಂದು ನಮ್ಮ ಜನರ ಪ್ರತಿನಿಧಿಗಳಾಗಿರುವವರು ಹಾಗೂ ಜವಾಬುದಾರಿಯುಳ್ಳವರು ಯಾರೂ ಹೀಗೆ ಹೇಳಲಾರರು ಮತ್ತು ಆರೀತಿ ಹೇಳುವುದು ಸಾಧ್ಯವೂ ಇಲ್ಲ ಎಂದು ಹೇಳುತ್ತೇನೆ. ನಾವು ಕೂಡ ಇದರ ಬಗ್ಗೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಕೇಂದ್ರಸರಕಾರದವರೂ ನಾವು ಹೇಳತಕ್ಕ ಮಾತನ್ನು ಒಪ್ಪುತ್ತಾರೆಂದು ಭಾವಿಸಿದ್ದೇವೆ. ಪೂರ್ತಿಯಾಗಿ ಕೃಷ್ಣಾನದಿಯ ನೀರನ್ನು ಉಪಯೋಗಿಸಿಕೊಳ್ಳಲು ನಮ್ಮಲ್ಲಿ ಇನ್ನೂ ನೀರಾವರಿ ಕೆಲಸಗಳು ಆಗಲಿಲ್ಲ. ಇನ್ನು ಕಾವೇರಿ ನದಿ ನೀರಿನ ಬಗ್ಗೆ 1924 ರಲ್ಲಿ ಆದ ಅಗ್ರಿಮೆಂಟಿನಲ್ಲಿ ಆಗಿರುವ ಕರಾರನ್ನು ಮದ್ರಾಸು ಸರಕಾರದವರು ಒಪ್ಪುತ್ತಿಲ್ಲ ಎಂದು ಇಲ್ಲ ಹೇಳಿದರು. ಆ ರೀತಿಯಾಗಲು ಸಾಧ್ಯವಿಲ್ಲ. ಪುನಃ 1974 ರಲ್ಲಿ ಈ ಕರಾರನ್ನು ಪರಿಶೀಲನೆ ಮಾಡುವಾಗ ಮದ್ರಾಸು ರಾಜ್ಯಸರಕಾರದವರು ನಮ್ಮ ಸರಕಾರದವರೊಡನೆ ಕುಳಿತು ಚರ್ಚೆ ಮಾಡಲು ಅವಕಾಶಗಳಿವೆ. 1974 ನೇ ಇಸವಿಯಲ್ಲಿ ನೀರಾವರಿ ಯೋಜನೆಗಳನ್ನು ಕಾವೇರಿ ನದಿಯ ನೀರಿನಿಂದ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಮದ್ರಾಸು ಸರ್ಕಾರದವರು ಹೇಳುವುದಕ್ಕೆ ಬರುವುದಿಲ್ಲ. ಮುಖ್ಯವಾದ ಕಟ್ಟೆಗಳನ್ನು ಕಟ್ಟಬೇಕೆಂದು ಹೇಳುವಾಗ ನಮ್ಮ ಹತ್ತಿರ ಆ ರಾಜ್ಯದವರೂ ಕೂಡ ಬಂದು ತಕ್ಕ ಸಲಹೆಗಳನ್ನು ಕೊಟ್ಟು ಅಂತಹ ನೀರಾವರಿ ಯೋಜನೆಗಳನ್ನು ಮಾಡಬೇಕಾಗುತ್ತದೆ. ಆದರೆ ನಮ್ಮ ಹತ್ತಿರ ದುಡ್ಡಿಲ್ಲ. ಇದಕ್ಕಾಗಿ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಈ ಪರ್ವಕಾಲದಲ್ಲಿ, ದೇಶವನ್ನು ಕಟ್ಟತಕ್ಕಕಾಲದಲ್ಲಿ, ಸಂದರ್ಭ ಒದಗಿದಾಗ ದೇಶಕ್ಕೆ ನಮ್ಮಿಂದ ಸರ್ವ ರೀತಿಯ ತ್ಯಾಗವನ್ನೂ ಜನರು ಅಪೇಕ್ಷೆ ಮಾಡಿದಾಗ ನಾವು ಹಣವನ್ನು ಶೇಕರಿಸತಕ್ಕಂತದ್ದು ನಮ್ಮ ಕರ್ತವ್ಯ. ಹಾಗೆ ನಾವೆಲ್ಲಾ ಪ್ರಯತ್ನಪಟ್ಟು ಬೇರೆಲ್ಲಾ ಕೆಲಸಗಳನ್ನು ಬಿಟ್ಟು ನಾವು ಮೊಟ್ಟಮೊದಲನೆಯದಾಗಿ ನೀರಾವರಿ ಕೆಲಸಕಾರ್ಯಗಳಿಗೆ ಸಾಕಷ್ಟು ಆದ್ಯತೆ ಕೊಟ್ಟರೆ ಅದರಿಂದ ನಮ್ಮ ಮುಖ್ಯವಾದ ಸಮಸ್ಯೆ ಪರಿಹಾರವಾಗಬಹುದೆಂದು ನನಗನಿಸುತ್ತದೆ ;

ಇವತ್ತಿನ ದಿವಸ ನಾವು ಕೈಗೊಂಡಿರತಕ್ಕ ನೀರಾವರಿ ಯೋಜನೆಗಳನ್ನು ಪೂರೈಸುವುದಾದರೆ, ಬಹುಶಃ ನಾಲ್ಕನೆ ಪಂಚವಾರ್ಷಿಕ ಯೋಜನೆಯು ಮುಗಿಯುವುದರೊಳಗೆ ನಮ್ಮ ಅಕ್ಕಿ ಕೊರತೆಯು ಪೂರೈಸಬಹುದೆಂದು ನನಗನಿಸುತ್ತದೆ. ಇವತ್ತಿನ ದಿವಸ ಭೂಕಂದಾಯ ಇರಬೇಕೋ, ಇರಬೇಡವೋ, ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಅದನ್ನು ಸುಮಾರು ಎರಡೂವರೆ ವರ್ಷದ ಕೆಳಗೆ ಹೇಳಿದ್ದೆ. ಅದನ್ನು ಬಿಟ್ಟರೆ ಬಿಡಬಹುದು. ಆದರೆ, ಅದರಿಂದ ಲುಕ್ಸಾನು ಆಗತಕ್ಕದ್ದನ್ನು ಯಾವ ರೀತಿ ಭರ್ತಿ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಅದಕ್ಕೆ ಬೇಕಾಗಿರತಕ್ಕ ವಿಧಾಯಕವಾದ ಸೂಚನೆಗಳನ್ನು ಕೊಟ್ಟರೆ ಅದನ್ನು ಸರ್ಕಾರ ಪರಿಶೀಲನೆ ಮಾಡಿ ಒಂದು ಇತ್ಯರ್ಥಕ್ಕೆ ಬರಬಹುದು. ಇಂತಹ ಸಲಹೆಗಳು, ಸೂಚನೆಗಳು, ಎಲ್ಲಿಂದ ಬಂದರೂ, ಯಾರು ಮಾಡಿದರೂ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಅತ್ಯಾವಶ್ಯಕವಾದುವುಗಳನ್ನು ನೋಡಿ ಜನತೆಯ ಮೇಲೆ ಯೋಗ್ಯವಾದ ರೀತಿಯಲ್ಲಿ, ಕಂದಾಯವನ್ನು ಹೊರಿಸುವುದಕ್ಕೆ ಪ್ರಯತ್ನಿಸಿ, ನಮ್ಮ ಕೊರತೆ ಏನು ಇದೆ, ಅದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡಬಹುದು. ಇದಕ್ಕಾಗಿ ತಮ್ಮ ಸೂಚನೆಗಳನ್ನು ಕೇಳುತ್ತಿದ್ದೇನೆ. ಇವತ್ತಿನ ದಿವಸ ಕೊಡದಿದ್ದರೂ, ಕಾರಣ ಚುನಾವಣೆಯ ಕಾವಿನಲ್ಲಿರುವುದರಿಂದ ಮುಂದಿನ ಸಲ ಸೇರುವುದರೊಳಗೆ ಕೊಟ್ಟರೆ, ಯಾವುದು ಅತ್ಯಾವಶ್ಯಕವೆಂದು ಕಂಡುಬರುತ್ತದೆಯೋ ಅದನ್ನು ಅತ್ಯಂತ ಕುತೂಹಲದಿಂದ ಕೇಳಿ ಒಪ್ಪಿಕೊಂಡು ಕೆಲಸಮಾಡತಕ್ಕದ್ದು ಅತ್ಯಂತ ಅವ್ಯಶಕ. ಭೂಕಂದಾಯವನ್ನು ಬಹುಶಃ ಬಿಟ್ಟರೂ ಬಿಡಬಹುದು. ಆದರೆ ಒಂದು ಮಾತು ಹೇಳತಕ್ಕದು ಅವಶ್ಯಕ. ಸರ್ಕಾರಕ್ಕೆ ಮತ್ತು ರೈತರಿಗೆ ಒಂದು ಸಂಬಂಧ ಇದೆ. ಕಾನೂನು ಪ್ರಕಾರ ಎಲ್ಲಾ ಜಮೀನು, ನೆಲವೂ ಸರ್ಕಾರಕ್ಕೆ ಸೇರಿದ್ದು. ರೈತ ನಮ್ಮಿಂದ ಜಮೀನು ತೆಗೆದುಕೊಂಡು ಮಾರಿದ್ದರೂ ಸಹಾ ಬುನಾದಿಯಾಗಿ ಜಮೀನು ಸರ್ಕಾರಕ್ಕೆ ಸೇರಿದ್ದು. ಇದಕ್ಕೆ ರಿಕಾರ್ಡ್ಸ್ ಆಫ್ ರೆಟ್ಸ್ ಇರಬೇಕು. ಅವನು ಮಾರಾಟ ಮಾಡಿದರೆ, ಅಥವಾ ಅಡವು ಹಾಕಿದರೆ ಅದಕ್ಕೆ ಸರಿಯಾದ ಲೆಕ್ಕ ಇಡುವುದಕ್ಕೆ ಏರ್ಪಾಡು ಮಾಡುವುದು ಅತ್ಯಂತ ಮುಖ್ಯವಾದುದು. ಇವತ್ತಿನ ದಿವಸ ನಮ್ಮ ಮುಖ್ಯವಾದಂತಹ ಕೆಲಸ ನೀರಾವರಿ ಯೋಜನೆಗಳನ್ನು ಜಾಸ್ತಿಮಾಡತಕ್ಕಂತದ್ದು. ನೀರಾವರಿ ಯೋಜನೆಗಳು ಜಾಸ್ತಿಯಾದಂತೆ ಅದಕ್ಕೆ ಸರಿಯಾದ ರೀತಿಯಲ್ಲಿ ಗೊಬ್ಬರದ ತಯಾರಿಕೆಯೂ ಅವಶ್ಯಕ. ಈಗ ನಮ್ಮಲ್ಲಿ ಇರತಕ್ಕಂತಹ ಬೆಳಗೊಳದ ಕಾರ್ಖಾನೆ ಬಹಳ ಸಣ್ಣದಾಗಿದೆ. ಅದನ್ನು ದೊಡ್ಡದು ಮಾಡುವ ಯೋಜನೆಯೂ ಇದೆ. ತುಂಗಭಧ್ರಾದಲ್ಲಿ ಒಂದು ಇದೆ. ಅದು ಖಾಸಗಿ ಕ್ಷೇತ್ರದಲ್ಲಿ ಇದೆ. ಇನ್ನು ಒಂದು ಸಂತೋಷದ ಮಾತು ಏನೆಂದರೆ, ಈಗ ಒಂದು ದೊಡ್ಡ ಕಾರ್ಖಾನೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಅಂದಾಜು ಇದೆ. ಮಲಬಾರ್ ಫರ್ಟಿಲೈಜರ್ಸ್ ಕಂಪೆನಿಯವರು ಮುಂದೆ ಬಂದು ಪ್ರಾರಂಭಿಸಲು ಒಪ್ಪಿಕೊಂಡಿದ್ದಾರೆ. ಅದಕ್ಕೆ ಬೇಕಾದ, ಜಮೀನು ವೈಗೆರೆ ಸಿದ್ಧವಾಗಿದೆ. ಇಷ್ಟರಲ್ಲೇ ಅದು ತಯಾರಾದೀತು ಎಂದು ನನಗನಿಸುತ್ತದೆ. ಅದು ಆದರೆ, ಇಲ್ಲಿ ಸುಮಾರು 10 ಲಕ್ಷ ಟನ್ ಗೊಬ್ಬರ ತಯಾರು ಮಾಡುವುದಕ್ಕಾಗುತ್ತದೆ. ಅದೇ ರೀತಿ ಗೋಕರ್ಣ, ಅಂದರೆ ಉತ್ತರ ಕನ್ನಡ ಪ್ರದೇಶದಲ್ಲಿ ಸರ್ಕಾರಿ ಕ್ಷೇತ್ರದಲ್ಲಿ ಮತ್ತೊಂದು ಗೊಬ್ಬರ ಕಾರ್ಖಾನೆಯನ್ನು ಮಾಡಬೇಕೆಂದು ಅಪೇಕ್ಷೆ ಇಟ್ಟುಕೊಂಡಿದ್ದೇವೆ. ಅದನ್ನು ಕೂಡ ಸರ್ಕಾರ ಯೋಚನೆ ಮಾಡುತ್ತಿದೆ. ಹೀಗೆ ಅನೇಕ ರೀತಿಯಲ್ಲಿ ಗೊಬ್ಬರವನ್ನು ತಯಾರುಮಾಡುವುದು ಅತಿ ಅವಶ್ಯಕವಾಗಿದೆ. ಅದೇ ರೀತಿಯಲ್ಲಿ ಇದರ ಜೊತೆಗೆ ಕ್ರಿಮಿನಾಶಕ ವಸ್ತುಗಳನ್ನೂ ಮಾಡತಕ್ಕದು ಅವಶ್ಯವೆಂದು ತಿಳಿಯಬೇಕು. ಅಲ್ಲದೆ ರೈತರಿಗೆ ಸಾಲ ಸಕಾಲದಲ್ಲಿ ಸಿಗಬೇಕು. ಸಕಾಲದಲ್ಲಿ ಅವನಿಗೆ ಸಾಲ ಸಿಗದ್ದಿದರೆ ಅವನು ಬೇರೆ ಕಡೆಯಿಂದ ತೆಗೆದು ಜಾಸ್ತಿ ಬಡ್ಡಿಕೊಡಬೇಕಾದ ಪ್ರಮೇಯವಿರುತ್ತದೆ. ಈಗ 14–15 ವರ್ಷಗಳ ಕೆಳಗೆ ಶೇಕಡಾ ಮೂರರಷ್ಟು ಸೊಸೈಟಿಗಳ ಮುಖಾಂತರ ಇದೆಲ್ಲಾ ಸಲ್ಲುತ್ತಿತ್ತು. ಆದರೆ, ಈಗ ಶೇಕಡಾ 25–30 ರಷ್ಟು ಸಂದಾಯವಾಗುತ್ತಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅವುಗಳನ್ನು ದುರಸ್ತಿ ಮಾಡಲಿಕ್ಕಾಗುವುದಿಲ್ಲ. ಅಷ್ಟು ಅವು ಗಳು ಕೆಟ್ಟು ಹೋಗಿವೆ.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ನಾವು ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹೆಚ್ಚು ಸಂಶಯವಿರಬಾರದು. ಸಂಶಯಾತ್ಮ ವಿನಶ್ಯತಿ ಎಂಬಂತೆ ವಿಪರೀತ ಸಂಶಯಮಾಡಿದರೆ ಅದು ವಿನಾಶಕ್ಕೆ ಕಾರಣವೆಂಬುದನ್ನು ತಾವೆಲ್ಲಾ ತಿಳಿಯಬೇಕು. ಹಾಗೆ ದೊಡ್ಡ ದೊಡ್ಡ ನೀರಾವರಿ, ಸಣ್ಣ ಸಣ್ಣ ನೀರಾವರಿ, ನೀರಾವರಿ ಬಾವಿಗಳು ಮುಂತಾದುವುಗಳೆಲ್ಲಾ ಎಷ್ಟು ಪ್ರದೇಶದಲ್ಲಿ ಜಾಸ್ತಿಯಾಗುತ್ತದೋ, ಅಷ್ಟೇ ಜಾಸ್ತಿಯಾಗಿ, ಗೊಬ್ಬರ, ಕ್ರಿಮಿನಾಶಕವಸ್ತುಗಳು ಮುಂತಾದುವುಗಳನ್ನು ಜಾಸ್ತಿಮಾಡಬೇಕಾಗುತ್ತದೆ. ಅದಕ್ಕೆಲ್ಲಾ ರೈತರಿಗೆ ಸಕಾಲದಲ್ಲಿ ಸಾಲ ಸಿಗಬೇಕು. ಇನ್ನೊಂದು ಸಂತೋಷದ ಮಾತೆಂದರೆ, ನಮ್ಮಲ್ಲಿ ಸಾಕಷ್ಟು ಬಾವಿಗಳನ್ನು ತೆಗೆಸಿದ್ದೇವೆ. ಇವತ್ತಿನ ದಿವಸ ಸುಮಾರು ಎರಡು ಲಕ್ಷಕ್ಕೂ ಹೆಚ್ಚಾಗಿ ಬಾವಿಗಳನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸಬೇಕೆಂದಿದ್ದಾರೆ. ಈಗಾಗಲೇ ಒಂದು ಲಕ್ಷ 80 ಸಾವಿರ ಇದೆ. ಮತ್ತು ಇನ್ನೂ ಒಂದು ಲಕ್ಷ ಮಾಡುತ್ತಾರೆ. ಇದಕ್ಕೆ ಬೇಕಾದ 50 ಲಕ್ಷ ಪಂಪುಗಳನ್ನು ಹಾಕಬಹುದು ; ಹಾಗೆ ಇನ್ನೂ ಜಾಸ್ತಿ ಬೇಕಾದರೆ ಹಾಕಬಹುದು. ಇನ್ನೊಂದು ವಿಷಯ ಈ ರೀತಿ ಹಾಕುವಾಗ ನಿಜವಾಗಿಯೂ ಭೂಮಿಯ ಒಳಗಡೆ ನೀರು ಎಷ್ಟು ಇದೆ ಎಂಬುದನ್ನು ತಿಳಿದುಕೊಂಡು ಕೊಟ್ಟರೆ ಒಳ್ಳೆಯದು. ಆದ್ದರಿಂದ ಮೊದಲು ಅದನ್ನು ವಿಚಾರ ಮಾಡುವುದು ಅತ್ಯಾವಶ್ಯಕ. ಅದಕ್ಕಾಗಿ ತಜ್ಞರನ್ನು ನೇಮಕ ಮಾಡಿ ಪರಿಶೀಲನೆ ಮಾಡುವುದು ಮುಖ್ಯವಾದುದು. ಉದಾಹರಣೆಗೆ ಈಗ 5 ಸಾವಿರ ಪಂಪುಗಳಿಗೆ ಸಾಕಾಗುವಷ್ಟು ನೀರು ಇದ್ದ ಕಡೆ 10 ಸಾವಿರ ಪಂಪು ಸೆಟ್ಟುಗಳನ್ನು ಹಾಕುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕೆ ಅದನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡಿಯೇ ಮಾಡಬೇಕಾಗುತ್ತದೆ. ಅದೇ ರೀತಿ ನಮ್ಮ ಕಂಟೂರ್ ಬಂಡಿಂಗ್ ಕೆಲಸ ಕೂಡ ಮೈಸೂರಿನಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಮಾಡಿದ್ದಾರೆ. ನಾವು ಮಾಡಿದಷ್ಟು ಸಣ್ಣ ನೀರಾವರಿ ಯೋಜನೆಗಳು, ಹಾಗೂ ಕಂಟೂರ್ ಬಂಡಿಗ್ ಬೇರೆ ಯಾರೂ ಮಾಡಿಲ್ಲ ಎಂಬುದು ನಮಗೆ ಒಂದು ಹೆಮ್ಮೆಯ ಮಾತು. ಹಾಗೆ, ಮತ್ತೊಂದು ಸಂತೋಷದ ಮಾತು–ಇವತ್ತಿನ ದಿವಸ ಕರ್ಣಾಟಕದ ರೈತರು ಬಹಳ ಚೆನ್ನಾಗಿ ಈ ಹೊಸ ಹೊಸ ಬೀಜಗಳ ವಿಚಾರವನ್ನು ಅರಿತುಕೊಂಡು, ಹೆಚ್ಚು ಹೆಚ್ಚಾಗಿ ತಯಾರು ಮಾಡುತ್ತಿದ್ದಾರೆ. ಉದಾಹರಣೆಗೆ ಹೈಬ್ರಿಡ್ ಮೈಸ್, ಹೈಬ್ರಿಡ್ ಜೋಳ, ಹೈಬ್ರಿಡ್ ಬಾಜ್ರ ಮೊದಲಾದುವುಗಳನ್ನು ಬಹಳ ಉತ್ತಮ ರೀತಿಯಲ್ಲಿ ಬೆಳೆಸುತ್ತಿದ್ದಾರೆ. ಮಾನ್ಯ ಶ್ರೀ ಕಾಶೀಮಠರವರ ಊರಿಗೆ ನಾನು ಹೋಗಿ ನೋಡಿದ್ದೆ, ಅದು ಬಹಳ ಸಂತೋಷವಾದ ವಿಚಾರ. ಒಂದು ಎಕರೆಯಲ್ಲಿ 4–5 ಸಾವಿರ ರೂಪಾಯಿಯಷ್ಟು ಸಂಪಾದನೆ ಮಾಡುತ್ತಿದ್ದಾರೆ. ಇದರಿಂದ ನಮ್ಮ ರೈತರನ್ನು ನಾವು ನಿಜವಾಗಿಯೂ ಮೆಚ್ಚಬೇಕಾಗಿದೆ. ಇವತ್ತು ನಮ್ಮ ವ್ಯವಸಾಯಕ್ಕೆ ಬೇಕಾದ ಗೊಬ್ಬರ, ನೀರು, ಸಾಲ, ಹಾಗೂ ಕ್ರಿಮಿನಾಶಕ ವಸ್ತುಗಳೆಲ್ಲವನ್ನೂ ತಯಾರು ಮಾಡತಕ್ಕಂತದ್ದು ಅವಶ್ಯಕ. ಆದ್ದರಿಂದ ಬಾಕಿ ಎಲ್ಲಾ ಕೆಲಸಗಳನ್ನು ನಿಲ್ಲಿಸಿಯಾದರೂ, ಇದಕ್ಕೆ ಬೇಕಾದ ಏನೇನು ಕೆಲಸಗಳು ಇವೆ. ಅವುಗಳನ್ನು ಮಾಡುವುದು ಅತ್ಯವಶ್ಯಕ ಮತ್ತು ಸರ್ಕಾರದವರು ಇದನ್ನು ಈಗಾಗಲೇ ಯೋಚಿಸುತ್ತಿದ್ದಾರೆಂದು ಕಾಣುತ್ತಿದೆ.

11–00 A. M.

ಕೇಂದ್ರ ಸರ್ಕಾರದವರೂ ಇದೇ ರೀತಿ ಯೋಚನೆ ಮಾಡುವ ಸೂಚನೆಗಳು ಕಂಡುಬರುತ್ತಿವೆ, ಸಂತೋಷ. ಇದರ ಜೊತೆಗೆ ನಮಗೆ ಒಂದು ಸಂತೋಷದ ಮಾತು ಎಂದರೆ, ನಮ್ಮಲ್ಲಿ ಶರಾವತಿ ಯಲ್ಲಿ ಸಾಕಷ್ಟು ವಿದ್ಯುಚ್ಛಕ್ತಿ ಉತ್ಪತ್ತಿ ಆಗುತ್ತಿದೆ. ಶರಾವತಿಯ ವಿಚಾರದಲ್ಲಿ ಅನೇಕ ರೀತಿಯಲ್ಲಿ ಟೀಕೆಗಳು ಕೊನೆ ಮೊದಲಿಲ್ಲದಂತೆ ಈ ಮನೆಯಲ್ಲಿ ನಡೆದಿವೆ. ಶ್ರೀಮಾನ್ ಚನ್ನಬಸಪ್ಪ ನವರು ಹೇಳುತ್ತಿದ್ದರು, ಈ ಪ್ರಶ್ನೆ ಇನ್ನೂ ಮುಗಿದಂತಿಲ್ಲ ಎಂದು. ಇಂದಿಗೆ ಆ ಪ್ರಶ್ನೆ

ಮುಕ್ತಾಯವಾಗಬಹುದೆಂದು ಕಾಣುತ್ತದೆ. ಶರಾವತಿಯ ವಿಚಾರದಲ್ಲಿ ಆಡತಕ್ಕ ಮಾತುಗಳು ಮಾಡತಕ್ಕ ಟೀಕೆಗಳು ಅಲ್ಲದೆ ನಮ್ಮಲ್ಲೇನಿಲ್ಲ ಶ್ರೀಮಾನ್ ಚನ್ನಬಸಪ್ಪನವರು ಶರಾವತಿಯು ಒಂದು ದುರಂತ ನಾಟಕ ಎಂದು ಹೇಳಿದ್ದಾರೆ. ಅವರು ಕೂತರು, ನಿಂತರು, ಎದ್ದರು ಬಹಳ ಆವೇಶಪೂರಿತವಾಗಿ ಮಾತನಾಡಿ ಬಹುಶಃ ಒಂದು ನಾಟಕವನ್ನೇ ಆಡಿದ್ದಾರೆ. ದುಶ್ಯಾಸನ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು ಹೌದು, ಅದನ್ನು ನಿಮ್ಮ ಜೊತೆಯಲ್ಲೇ ಕಲಿತಿದ್ದು.

ಶ್ರೀ ಎಸ್. ನಿಜಲಿಂಗಪ್ಪ.—ನಾವಿಬ್ಬರೂ ಹಾಸ್ಟಲಿನಲ್ಲಿ ಜೊತೆಯಲ್ಲಿದ್ದೆವು. ಆಗ ನಾಟಕ ಆಡುತ್ತಿರಲಿಲ್ಲ. ಮುಖ್ಯವಾಗಿ ಈ ಶರಾವತಿಯ ವಿಚಾರ ಸುಮಾರು ನಾಲ್ಕೈದು ವರ್ಷಗಳಿಂದ ಇಲ್ಲಿ ಬಂದೇ ಬರುತ್ತಿದೆ. ಹಿಂದೆ ಕೆಲವು ವಿರೋಧ ಪಕ್ಷದ ಸದಸ್ಯರು ಮತ್ತು ನಮ್ಮವರು ಕೆಲವರು ಬೇರೆ ಬೇರೆಯಾಗಿ ಶರಾವತಿಯ ವಿಚಾರವನ್ನೂ ಸೇರಿಸಿ 24 ಕಾಲಂಗಳಿಂದ ಕೂಡಿದಂತಹ ಆಪಾದನೆಯ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ, ಕಾಂಗ್ರೆಸ್ ಅಧ್ಯಕ್ಷರಿಗೆ, ಪ್ರಧಾನಿಯವರಿಗೆ ಮತ್ತಿತರರಿಗೆ ಕಳುಹಿಸಿದ್ದರು. ಹಿಂದೊಮ್ಮೆ ಜತ್ತಿಯವರ ಮಂತ್ರಿಮಂಡಲದ ಮೇಲೆ ಬಂದಿದ್ದ ಆಪಾದನೆಗಳನ್ನು ಎರಡು ಮೂರು ದಿನ ಹಗಲಿರಳೂ ಚರ್ಚಿಸಿದಂತೆ ಈಗಲೂ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದು ಪಕ್ಷದಲ್ಲಿ ತಪ್ಪುಗಳಿದ್ದರೆ ಪಕ್ಷದವರು ಕುಳಿತುಕೊಂಡು ಯೋಚನೆ ಮಾಡತಕ್ಕದ್ದು ಸರಿ. ಅದನ್ನು ನಾವು ತೀರ್ಮಾನ ಮಾಡತಕ್ಕದ್ದು ನಮ್ಮ ಕರ್ತವ್ಯ. ತಪ್ಪು ಆಗಿದ್ದರೆ ಹಿಂದೆ ಅನೇಕಸಲ ಆ ರೀತಿ ಮಾಡಿದ್ದೇವೆ, ಆದರೆ ಈಗ ಅದು ಅಗತ್ಯವಿಲ್ಲ. ಈ ಬಗ್ಗೆ ಮಾಡಿದ ಆಪಾದನೆಗಳನ್ನು ಸ್ವೀಕರಿಸಿದವರು ಅವುಗಳನ್ನು ಸಾಕಷ್ಟು ಆಲೋಚಿಸಿ, ವಿಚಾರಮಾಡಿ, ವಿಷಯವನ್ನು ಸಂಗ್ರಹಣೆ ಮಾಡಿ ಅವುಗಳಲ್ಲಿ ಹುರುಳಿಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆ. ಅವರು ತೀರ್ಮಾನ ಕೊಟ್ಟಮೇಲೆ ಪುನಃ ಅದನ್ನು ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿಲ್ಲ ಮತ್ತು ಅಗತ್ಯವೂ ಇಲ್ಲ. ಶರಾವತಿಯ ವಿಚಾರದಲ್ಲಿ ಕೇವಲ ಪ್ರಚಾರಕ್ಕಾಗಿ, ತಪ್ಪು ಭಾವನೆಯನು ಕಲ್ಪಿಸುವುದಕ್ಕಾಗಿ ಕೇವಲ 'ಬದ್ ನಾಮ್' ಮಾಡುವುದಕ್ಕಾಗಿ ಮಾಡತಕ್ಕ ಪ್ರಯತ್ನಗಳೇ ವಿನಾ ಇದರಲ್ಲಿ ಯಾವ ಅರ್ಥವೂ ಇಲ್ಲ.

ಮತ್ತೊಂದು ವಿಷಯ ಶ್ರೀಮಾನ್ ಚನ್ನಬಸಪ್ಪನವರು ಮಾಡಿದ್ದಂಥ ಶರಾವತಿ ಯೋಜನೆಗೆ ಸಂಬಂಧಿಸಿದ ಪಂಚಾಯಿತಿ ನಿಧಿಯಿಂದ ನಮಗೆ ತೊಂದರೆಯಾಗಿದೆ. ಆದರೆ ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆಗ್ಗೆ ಶರಾವತಿಯ ಯೋಜನೆ ಆದಷ್ಟು ಜಾಗ್ರತೆ ಮುಗಿಯಬೇಕಾಗಿತ್ತು. ಈ ಸಭೆಯಲ್ಲಿ ಅನೇಕ ಜನ ಮಾನ್ಯ ಸದಸ್ಯರು ನಮ್ಮನ್ನು ಏನು ಮಾಡುತ್ತಿದ್ದೀರಿ, ಶರಾವತಿಯ ಯೋಜನೆಯ ಕೆಲಸ ತಡವಾಯಿತು ಎಂದು ಹೇಳಿದ್ದಾರೆ. ವರ್ಷದಲ್ಲಿ 6-7 ತಿಂಗಳು ಕೆಲಸ ನಡೆಯುವುದಿಲ್ಲವಾದ್ದರಿಂದ ಉಳಿದ ಅವಧಿಯಲ್ಲಿ ಕೆಲಸ ನಡೆಸಬೇಕಾಗಿತ್ತು. ಅಮೇರಿಕಾದ ಸ್ನೇಹಿತರೊಬ್ಬರು ಶರಾವತಿ ಪ್ರಾಜೆಕ್ಟನ್ನು ನೋಡಿ ಪ್ರಪಂಚದಲ್ಲೇ ಇಷ್ಟು ಸುಲಭವಾಗಿ, ಇಷ್ಟು ಜಾಗ್ರತೆಯಾಗಿ, ಇಷ್ಟು ಯಶಸ್ವಿಯಾಗಿ ಇಷ್ಟು ದೊಡ್ಡದಾದ ಪ್ರಾಜೆಕ್ಟನ್ನ ನಮ್ಮ ಇಂಜಿನಿಯರು ಕಟ್ಟಿರತಕ್ಕದ್ದು ಇದು ಒಂದೇ ಯೋಜನೆ ಎಂದು ಹೇಳಿದ್ದಾರೆ. ಅವರು ಇದನ್ನು ನೋಡಿ ಆಶ್ಚರ್ಯಪಟ್ಟಿದ್ದಾರೆ. ಯಂತ್ರಗಳ ಉಪಯೋಗವನ್ನು ಕಡಿಮೆ ಮಾಡಿ ಬರೀ ಜನಗಳಿಂದ ಈ ಯೋಜನೆಯನ್ನು ಕಟ್ಟಿರುವುದು ಆಶ್ಚರ್ಯ ಎಂದು ಹೇಳಿದ್ದಾರೆ. ಹೀಗಿರುವಾಗ ಈ ವಿಷಯದಲ್ಲಿ ಇಲ್ಲದ ಸಲ್ಲದ ಆರೋಪಣೆಗಳನ್ನ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ವಿಚಾರದಲ್ಲಿ ಜನ ಸಾಕಷ್ಟು ಯೋಚನೆ ಮಾಡಿದ್ದಾರೆ. ಈ ಯೋಜನೆಯಲ್ಲಿ ಏನೂ ಹಣ ದುರುಪಯೋಗವಾಗಿಲ್ಲವೆಂದು ನನ್ನ ಮನಸ್ಸಿಗೆ ಖಾತರಿಯಾಗಿದೆ. ಈ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳಬೇಕಾದ್ದಿಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಶ್ರೀಮಾನ್ ಚನ್ನಬಸಪ್ಪನವರು ಇನ್ನೂ ಒಂದು ಬಟ್ಟೆ ಹಾವನ್ನು ಬಿಟ್ಟಿದ್ದಾರೆ. ಅದೇನೆಂದರೆ, ಇಂಡಿಯನ್ ಪೀನಲ್

(ಶ್ರೀ ಎಸ್. ನಿಜಲಿಂಗಪ್ಪ)

ಕೋಡ್ ಪ್ರಕಾರ ಕೇಸ್ ಹಾಕುತ್ತೇವೆ ಎಂದು ಹೇಳಿದ್ದಾರೆ. ಬಹಶಃ ಅವರಿಗೆ ನನ್ನೊಬ್ಬನ ಮೇಲೆಯೇ ಸಿಟ್ಟಿದೆ ಎಂದು ಕಾಣುತ್ತದೆ. ಹಿಂದೆ ಕೌನ್ಸಿಲ್ ಮತ್ತು ರಾಜ್ಯಸಭೆ ಚುನಾವಣೆ ನಡೆದಾಗ ನನ್ನಹತ್ತಿರ ಮೂರು ಸಲ ಬಂದು ನನ್ನನ್ನು ಉಮೇದುವಾರನನ್ನಾಗಿ ಮಾಡಬೇಕು ಎಂದು ಹೇಳಿದ್ದರು...

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ನಿಮ್ಮ ಪಕ್ಷದ ವಿಷಯ ನಮಗೆ ಬೇಡ, ಅದು ನಮಗೆ ಸಂಬಂಧಿಸಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಇರಲಿ, ಸ್ವಲ್ಪ ಸಮಾಧಾನದಿಂದ ಕೇಳಿ ಆದರೆ ಶ್ರೀಮಾನ್ ಚನ್ನ ಬಸಪ್ಪನವರಿಗೆ ನನ್ನ ಕೈಯಲ್ಲಿ ಟಿಕೆಟ್ ಕೊಡಿಸುವುದಕ್ಕೆ ಆಗಲಿಲ್ಲ. ಅದಕ್ಕೆ ನಾನೇ ಕಾರಣವೆಂದು ಅವರಿಗೆ ಸಿಟ್ಟು ಇರಬಹುದು ಎಂದು ಕಾಣುತ್ತದೆ. ಪಾಪ, ಎಷ್ಟೇ ಆದರೂ ಅವರು ದೊಡ್ಡವರು, ಬಹಳ ಸಂತೋಷ. ಮೊನ್ನೆ ಸಾರ್ವತ್ರಿಕ ಚುನಾವಣೆಯ ಕಾಲದಲ್ಲೂ ನನ್ನ ಹತ್ತಿರ ಒಂದು ಸಲ ಅವರು ಬಂದಿದ್ದರು, ಮತ್ತು ಯಾವುದಕ್ಕಾದರೂ ಉಮೇದುವಾರರನ್ನಾಗಿ ಮಾಡಬೇಕೆಂದು ಹೇಳಿದರು. ಅದಕ್ಕೆ ನಾನು ಕಮಿಟಿ ಇದೆ, ಆಗಲಿ ನೋಡೋಣ ಎಂದು ಹೇಳಿದ್ದೆ. ಅದೇ ಸಮಯದಲ್ಲಿ ನಾನು ಅವರನ್ನ ಕೇಳಿದೆ ನಾನು ಬಹಳ ಕೆಟ್ಟವನು ಮತ್ತು ಅಪ್ರಮಾಣಿಕ ಎಂದು ಪತ್ರ ಬರೆದಿದ್ದೀರಲ್ಲಾ ಹೇಗೆ ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಇಲ್ಲ, ಇಲ್ಲ, ನಿಮ್ಮ ಮೇಲೆ ಹೇಳಲಿಲ್ಲ ಎಂದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಆಪಾದನೆಗಳು ಸರ್ಕಾರದ ಮೇಲೆ ವಿನಾ ನಿಜಲಿಂಗಪ್ಪನವರ ಮೇಲೆ ವೈಯಕ್ತಿಕವಾಗಿ ಯಾವುದೂ ಮಾಡಿಲ್ಲ ಎಂದು ನಾನು ಹೇಳಿದ್ದು ನಿಜ; ಅದನ್ನು ಇವೊತ್ತೂ ಹೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಬಹಳ ಸಂತೋಷ. ನಾನು ಇದಕ್ಕಾಗಿ ಅವರಿಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಅವರು ಅಪಾದನೆಗಳನ್ನು ಮಾಡತಕ್ಕ ರೀತಿಯಲ್ಲಿ ಜನಗಳಿಗೆ ಆ ರೀತಿ ಅಭಿಪ್ರಾಯ ಬಂತು.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—"Container put for the thing Contained." ಆ ಆಪಾದನೆಗಳು ಸರ್ಕಾರದ ಮೇಲೆ ಇರತಕ್ಕದ್ದು ಎಂದು ಹೇಳಿದರು. ಸರ್ಕಾರ ಎಂದರೆ ನೀವೆ. ಮುಖ್ಯ ಮಂತ್ರಿಗಳಾಗಿರುವತನಕ ನೀವು ಅದರ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಾರಿರಿ.

ಶ್ರೀ ಎಸ್. ನಿಜಲಿಂಗಪ್ಪ.—ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ ತುಂಟ ಕೆಲಸಕ್ಕೆ, ನೀಚ ಕೆಲಸಕ್ಕೆ ನನ್ನ ಮನಸ್ಸು ಎಂದೂ ಹೋಗಿಲ್ಲ. ನಾನು ಎಂದೂ ಆ ರೀತಿ ಮಾಡಿಲ್ಲ. ನನ್ನ ಹತ್ತಿರದ ಸಂಬಂಧಿಕರು ನನ್ನ ಮೂಲಕ ಯಾರಾದರೂ ಅಕ್ರಮವಾಗಿ ಹಣ ಸಂಪಾದಿಸಿದ್ದರೆ ಈಗಲೂ ಹೇಳಿ ಕ್ರಮ ತೆಗೆದುಕೊಳ್ಳುತ್ತೇನೆ. ಅಂಥಾದ್ದು ಏನಾದರೂ ಇದ್ದರೆ ತಿಳಿಸಿ ಎಂದು ಒಬ್ಬೊಬ್ಬರು ಸದಸ್ಯರಿಗೆ ಕೂಡ ನಾನು ಕಾಗದ ಬರೆದಿದ್ದೇನೆ. ಆ ರೀತಿ ಇದ್ದರೆ ನಾನು ಇಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ ಎಂದು ನಾನು ಅನೇಕ ಸಲ ಇಲ್ಲಿ ಹೇಳಿದ್ದೇನೆ. ಹೊರಗಡೆ ಕೂಡ ಹೇಳಿದ್ದೇನೆ. ನಾವು ರಾಜಕೀಯಕ್ಕೆ ಬಂದದ್ದು ಸುಖಪಡುವುದಕ್ಕಲ್ಲ, ಜಯಕಾರ ಹಾಕಿದರೆ ಸಾಕು, ಜೈಲಿಗೆ ಹಿಡಿದುಕೊಂಡು ಹೋಗತಕ್ಕಕಾಲದಲ್ಲಿ ನಾವು ರಾಜಕೀಯಕ್ಕೆ ಬಂದದ್ದು. ನಾನು ಹೇಳುವುದರಲ್ಲಿ ಸತ್ಯ ಇದೆ, ನ್ಯಾಯ ಇದೆ, ರಾಷ್ಟ್ರವನ್ನು ಕಟ್ಟಬೇಕು, ಜನರ ಸೇವೆ ಮಾಡಬೇಕೆಂದು ನಾವು ಇಲ್ಲಿ ಬಂದಿದ್ದೇವೆ. ನಾನು ಒಂದು ಮಟ್ಟದಲ್ಲಿ ಜೀವನವನ್ನು ನಡೆಸಿಕೊಂಡು ಬಂದೆ ನಾನು ಎಂದೂ ಕೀಳು ದರ್ಜೆಗೆ ಹೋಗಿಲ್ಲ. ಹೋಗುವುದಕ್ಕೆ ನಾನು ಇಚ್ಛೆಪಡುವುದಿಲ್ಲ.

ಇನ್ನು ಶರಾವತಿ ಯೋಜನೆಯಿಂದ ನಮಗೆ ಸುಮಾರು ಒಂದು ಲಕ್ಷ 80 ಸಾವಿರ ಕಿಲೋ ವಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ. ಮುಂದಿನ ತಿಂಗಳಲ್ಲಿ ಮತ್ತೆ ಎರಡು ಜನರೇಟರುಗಳು ಕೆಲಸ ಪ್ರಾರಂಭಿಸುತ್ತವೆ. ಅದು ಬಂದನಂತರ ಸುಮಾರು 3 ಲಕ್ಷ 60 ಸಾವಿರ ಕಿಲೊವಾಟ್ಸ್ ಉತ್ಪತ್ತಿಯಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ಸರ್ಕಾರದವರ ಮೇಲೆ ಹೊರಿಸಿದಂಥ ಆಪಾದನೆಗಳು ನಿಜವೋ ಸುಳ್ಳೋ ಎಂಬುದನ್ನು ತೀರ್ಮಾನಿಸುವುದು ಒಳ್ಳೆಯದಲ್ಲವೇ ಅದಕ್ಕಾಗಿ ಏತಕ್ಕೋಸ್ಕರ ಒಂದು ನಿಷ್ಪಕ್ಷಪಾತವಾದ ಒಂದು ಸಮಿತಿಯನ್ನು ರಚಿಸಿ ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಒಂದು ತೀರ್ಮಾನಕ್ಕೆ ಏಕೆ ಬರಬಾರದು ? ಇವೆಲ್ಲದರ ಬಗ್ಗೆ ಒಂದು ವಿಚಾರಣೆಯಾಗುವುದರಿಂದ ಸರ್ಕಾರಕ್ಕೆ ತೊಂದರೆ ಏನಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಳಿದ್ದಕ್ಕೆಲ್ಲಾ ವಿಚಾರಣೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಮಿತಿ ಇಲ್ಲದೆ ಹೋದೀತು !

ಇನ್ನು ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಅನೇಕ ಸದಸ್ಯರು ವಿಚಾರ ಮಾಡಿದ್ದಾರೆ. ಅದನ್ನು ಆ ರೀತಿ ವಿಚಾರ ಮಾಡುವುದು ಬಹಳ ಅವಶ್ಯಕವಿದೆ. ಸುಮಾರು 500 ಕೋಟಿ ರೂಪಾಯಿಗಳನ್ನು ಪೂರ್ತಿ ವಿದ್ಯುಚ್ಛಕ್ತಿಗಾಗಿ ಉಪಯೋಗಿಸಬೇಕಾಗಿದೆ. ಆ ರೀತಿಯಾಗಿ ಖರ್ಚು ಮಾಡುವುದರಿಂದ ಎಲ್ಲಾ ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡಬಹುದು. ಎಲ್ಲಾ ಹಳ್ಳಿಗಳಿಗೂ ಆ ರೀತಿ ವಿದ್ಯುಚ್ಛಕ್ತಿ ಸರಬರಾಜು ಮಾಡಿದಮೇಲೂ ಇನ್ನುಳಿದ 3½ ಅಥವಾ 4 ಲಕ್ಷ ಕಿಲೋವಾಟ್ಸನ್ನು ನಾವು ಉಪಯೋಗ ಮಾಡಬಹುದು. ಅದಕ್ಕಾಗಿ ಸಾಕಷ್ಟು ಪ್ರಯತ್ನ ನಡೆದಿದೆ. ಬೇಕಾದಷ್ಟು ಕೆಲಸಗಳಾಗಿವೆ. ಅನೇಕ ಜನಗಳನ್ನು ಆ ಕಾರ್ಯಕ್ಕಾಗಿ ಸೇರಿಸಿದ್ದೇವೆ. ಆದರೆ ಈ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ವಿಷಾದಪಡಬೇಕಾದ ವಿಷಯ ವೇನೆಂದರೆ, ನಮ್ಮಲ್ಲಿ ಕೈಗಾರಿಕೆಗಳನ್ನು ಮುಂದೆ ಬಂದು ಮಾಡತಕ್ಕವರು ಬಹಳ ಕಡಿಮೆ. ಸಣ್ಣ ಸಣ್ಣ ಕೈಗಾರಿಕೆಗಳಿಗಾಗಿ ಬರುತ್ತಾರೆ. ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗಾಗಿ ಬರು ವವರು ಬಹಳ ಕಡಿಮೆ. ಆದರೆ ನಮ್ಮ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಅವ ಕ್ಕಾಗಿ ಖರ್ಚು ಮಾಡುವ ಶಕ್ತಿ ಇಲ್ಲ. ಕೇಂದ್ರ ಸರ್ಕಾರದವರೂ ಮಾಡುವುದಕ್ಕೆ ಅವರಿಗೆ ಹೆಚ್ಚು ಶಕ್ತಿ ಇಲ್ಲ. ಖಾಸಗಿ ಕ್ಷೇತ್ರದಲ್ಲಿ ಬರುವವರಿಗೆ ಸ್ವಲ್ಪ ಮಟ್ಟಿಗಾದರೂ ಉತ್ತೇಜನ ಕೊಡುವುದು ಉತ್ತಮ. ಆ ವಿಷಯದಲ್ಲಿ ಶ್ರೀ ಜ್ವಾಲನಯ್ಯನವರು ಹೊರಗಡೆ ಕೊಡಬೇಕು ಎಂಬುದಾಗಿ ಸಲಹೆಯನ್ನು ಸಹ ಮಾಡಿದರು. ಅದರಿಂದ ಹೆಚ್ಚು ಉತ್ಪಾದನೆದಯಾದೀತೆಂದು ಹೇಳಿದರು.

ಶ್ರೀ ಬಿ. ಪಿ. ಗಂಗಾಧರ್.—ಇದುವರೆಗೂ ಉತ್ಪಾದನೆ ಆದುದನ್ನು ಏಕೆ ಸರಿಯಾಗಿ ಉಪ ಯೋಗ ಮಾಡಲಿಲ್ಲ. ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಬೇರೆ ವಿಷಯ ಸಂಬಂಧಪಟ್ಟ ಡಿಮ್ಯಾಂಡ್ ಬಂದಾಗ ಅದಕ್ಕೆ ಉತ್ತರ ಹೇಳಬಹುದು. ಸುಮಾರು 50 ವರ್ಷಗಳಿಂದಲೂ ಒಂದೇ ಪ್ರಯತ್ನ ಪಟ್ಟಿ ದ್ದಾರೆ. ನಾನು ಬೊಂಬಾಯಿಗೆ ಹೋಗಿದ್ದೆ. ಇಲ್ಲಿಗೆ ಬರತಕ್ಕ ಅನೇಕ ಜನರನ್ನು ಅಲ್ಲಿ ಮಾತನಾಡಿಸಿದ್ದೇನೆ. ನಾನು ಬೊಂಬಾಯಿಗೆ ಬರಬೇಕು ಎಂಬುದಾಗಿ ಅನೇಕ ಜನ ನನ್ನ ಸ್ನೇಹಿತರು ಸುಮಾರು 8–9 ತಿಂಗಳುಗಳಿಂದ ಕರೆಯುತ್ತಿದ್ದರು. ನಮ್ಮ ಕನ್ನಡದವರೇ ಅಲ್ಲಿ ಹೋಗಿ ಹತ್ತಾರು ಜನರು ಒಳ್ಳೆಯ ಸ್ಥಾನದಲ್ಲಿದ್ದಾರೆ. ಅವರು ಸಾಕಷ್ಟು ಕೈಗಾರಿಕೆಗಳನ್ನು ಇಟ್ಟಿದ್ದಾರೆ. ಅವರು ನನ್ನನ್ನು ಬೊಂಬಾಯಿಗೆ ಬನ್ನಿ, ನಾವು ಸಹಾಯ ಮಾಡುತ್ತೇವೆಂದು ಹೇಳಿದ್ದರು. ಅದಕ್ಕಾಗಿ ಜನವರಿ ತಿಂಗಳಲ್ಲಿ ಅಲ್ಲಿಗೆ ಹೋಗಿದ್ದೆ. ಅಲ್ಲಿ ಹೋಗಿ ನಮ್ಮ ಕನ್ನಡದವರೇ ಒಂದು ಒಳ್ಳೆಯ ಸ್ಥಾನವನ್ನು ಪಡೆದಿರುವುದು ನಮಗೆ ಹೆಮ್ಮೆಯ ಮಾತು.

(ಶ್ರೀ ಎಸ್. ನಿಜಲಿಂಗಪ್ಪ)

ನಾನು ಅಲ್ಲಿಗೆ ಹೋದ್ದರಿಂದ ಅದಕ್ಕೇನೋ ಒಂದು ಅರ್ಥವನ್ನು ವಿರೋಧ ಪಕ್ಷದ ಕೆಲವು ಸದಸ್ಯರು ಕಟ್ಟಿದರು. ಚುನಾವಣಾ ನಿಧಿಗಾಗಿ ಹಣವನ್ನು ಕೇಳುವುದಕ್ಕೋಸ್ಕರ ನಾನು ಬೊಂಬಾಯಿಗೆ ಹೋಗಿದ್ದೆ ಎಂದು ಹೇಳಿದರು. ನಾನು ಸ್ಪಷ್ಟವಾಗಿ ಈ ವಿಚಾರವಾಗಿ ಹೇಳ ಬೇಕಾದರೆ ನಾನು ಯಾವ ಒಬ್ಬ ಮನುಷ್ಯನನ್ನೂ ಚುನಾವಣಾ ನಿಧಿಗಾಗಿ ಒಂದು ಕಾಸು ಕೂಡ ಕೊಡಿ ಎಂದು ಕೇಳಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ನೀವು ಕೇಳುವುದು, ಹೇಳುವುದು ನಮಗೆ ಚೆನ್ನಾಗಿ ಗೊತ್ತು.

ಶ್ರೀ ಎಸ್. ನಿಜಲಿಂಗಪ್ಪ.—ಅದು ''ಸಂಶಯಾತ್ಮಾ ವಿನಶ್ಯತಿ'' ಎಂದು ಹೇಳುವ ಹಾಗಾಗುತ್ತದೆ. ವಿರೋಧಪಕ್ಷದವರು ಆ ರೀತಿ ಯೋಚನೆ ಮಾಡುವುದರಲ್ಲಿ ಸಂತೋಷವಿದ್ದರ ಆ ರೀತಿಯಾಗಿಯೇ ಯೋಚನೆ ಮಾಡಬಹುದು. ಅವರವರ ಬುದ್ಧಿ ಹೇಗೆ ಹೇಗೆ ಕೆಲಸ ಮಾಡು ತ್ತದೆಯೋ ಅವರ ಯೋಚನೆ ಹಾಗೆ ಇರುತ್ತದೆ. ನಾನು ಯಾರನ್ನೂ ಅಲ್ಲಿ ಹೋಗಿ ಚುನಾವಣಾ ನಿಧಿಗೆ ದುಡ್ಡು ಬೇಕೆಂಬುದಾಗಿ ಕೇಳಲಿಲ್ಲ. ಬಹಳ ದೊಡ್ಡ ದೊಡ್ಡ ಸಂಸ್ಥೆಗಳಿಗೆ ಹೋಗಿದ್ದೆ. ಅಲ್ಲಿ ಹೋಗಿ ಸಾಕಷ್ಟು ಮಾತನಾಡಿಕೊಂಡು ಬಂದಿದ್ದೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಕೊಯಮುತ್ತೂರು ನೋಟುಗಳ ವಿಷಯ.

ಶ್ರೀ ಎಸ್. ನಿಜಲಿಂಗಪ್ಪ.—ಅದು ಶ್ರೀ ಶೆಟ್ಟಿ ಅವರಿಗೆ ಗೊತ್ತಿರಬಹುದು. ಅದು ಬೇರೆ ರಾಜ್ಯಕ್ಕೆ ಸಂಬಂಧಪಟ್ಟುದು, ಮೈಸೂರಿಗಲ್ಲ. ನಾನು ಅಲ್ಲಿಗೆ ಹೋದ ತಕ್ಷಣ ದೊಡ್ಡ ದೊಡ್ಡ ಕೈಗಾರಿಕೆಗಾರರು ಕಾದಿದ್ದು ಅವರವರ ಕಾರ್ಖಾನೆಗೆ ಕರೆದುಕೊಂಡು ಹೋಗಿ ತೋರಿಸಿದರು. ಪ್ರೆಸ್ ಕಾನ್ಫರೆನ್ಸಿನಲ್ಲಿ ನೂರಾರು ಜನ ಕಾದಿದ್ದರು. ದೊಡ್ಡ ದೊಡ್ಡ ಕೈಗಾರಿಕೆದಾರರು ಅಲ್ಲಿ ನನಗೋಸ್ಕರ ಒಂದು ಸತ್ಕಾರ ಕೂಟವನ್ನು ಏರ್ಪಾಡು ಮಾಡಿದ್ದರು. ಜೆ. ಆರ್. ಡಿ. ತಾತಾ ಅವರೂ ಕೂಡ ಒಂದು ಕೂಟವನ್ನು ಏರ್ಪಾಡು ಮಾಡಿದ್ದರು. ಸಿ. ಸಿ. ಐ. ಅವರೂ ಒಂದು ಕೂಟವನ್ನು ಏರ್ಪಾಡು ಮಾಡಿದರು. ಸೌತ್ ಇಂಡಿಯನ್ ಸಿಂಧಿ ಅಸೋಸಿಯೇಷನ್ ಅವರು ಮತ್ತು ಇಂಡಿಯನ್ ಮರ್ಚೆಂಟ್ಸ್ ಚೆಂಬರ್ ಆಫ್ ಕಾಮರ್ಸಿನ ವರೂ ಸಹ ಒಂದು ಕೂಟವನ್ನು ಏರ್ಪಡಿಸಿದರು. ಅದು ಬಹುಶಃ ಇಡೀ ಹಿಂದೂಸ್ತಾನ ದಲ್ಲೆಲ್ಲಾ ಅತ್ಯಂತ ಮುಖ್ಯವಾದ ವ್ಯವಹಾರ ಶಾಖೆ. ಕೇಂದ್ರದಿಂದ ನಮ್ಮ ಮೈಸೂರಿನಲ್ಲಿ ನಮ್ಮ ಅನೇಕ ಕೈಗಾರಿಕೆಗಳಿಗೆ ಹಾಗೂ ದೊಡ್ಡ ದೊಡ್ಡ ಉದ್ಯಮಗಳಿಗೆ ಹೆಚ್ಚಿಗೆ ಹಣ ಸಹಾಯ ಮಾಡುತ್ತಿದ್ದಾರೆ. ನಾವು ಆ ಬಗ್ಗೆ ಒಂದು ಸರ್ಕಾರಿ ಆಜ್ಞೆಯನ್ನು ಮಾಡಿದ್ದೇವೆ. ಆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಅದರ ಒಂದು ನಕಲನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ.

Sri B. P. Gangadhar.—I want to know the number and date.

ಶ್ರೀ ಎಸ್. ನಿಜಲಿಂಗಪ್ಪ.—1966 ನೇ ನವಂಬರ್ 30ನೇ ತಾರೀಖು ಜಿ. ಒ. ನಂ. ಸಿ.ಟಿ. 126 ಜಿ. ಎಂ. ಐ. 64 ರ ಪ್ರಕಾರ ಒಂದು ಸರ್ಕಾರೀ ಆಜ್ಞೆ ಹೊರಡಿಸಿದೆ. ಆ ಪ್ರಕಾರ ಏನೇನು ರಿಯಾಯಿತಿಗಳನ್ನು ಕೊಡಬೇಕೋ ಎಲ್ಲವನ್ನೂ ಕೊಟ್ಟಿದ್ದೇವೆ. ಜಮೀನುಗಳನ್ನು ಕೊಟ್ಟಿದ್ದೇವೆ. ಆಕ್ಟ್ರಾಯಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಇನ್ನೂ ಇತರ ಬೇರೆ ಬೇರೆ ಸವ ಲತ್ತುಗಳನ್ನೂ ಕೊಟ್ಟಿದ್ದೇವೆ. ಯೋಗ್ಯ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡರೆ ಯಾವ್ಯಾವ ರಿಯಾಯಿತಿಗಳನ್ನು ಕೊಟ್ಟಿದ್ದೇವೆಂಬುದನ್ನೂ ಸಹ ಅದರಲ್ಲಿ ಆರ್ಡರ್ ಮಾಡಿದ್ದೇವೆ. ಅದನ್ನು ಓದಿದರೆ ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಆದ್ದರಿಂದ ಸರ್ಕಾರ

ಹೆಚ್ಚು ಕೈಗಾರಿಕೆಗಳನ್ನು ಬೆಳೆಸಬೇಕೆಂದು ಉದ್ಯುಕ್ತವಾಗಿದೆ. ಅದು ಆಗಬೇಕು. ನಾವು ಈಗ ಮಾಡಬೇಕಾದದು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಉದ್ಯೋಗಗಳು ಬರಬೇಕು. ನಾವು ಆ ರೀತಿ ಮಾಡಿದರೆ ಸರಿ. ಆದರೆ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಏನೇನು ತೀರ್ಮಾನ ಮಾಡಿದ್ದಾರೋ ಅದೇ ರೀತಿ ನಾವೂ ಸಹ ಮಾಡಬೇಕೆಂದು ತೀರ್ಮಾನ ಮಾಡುವುದಕ್ಕಾಗು ವುದಿಲ್ಲ. ಯಾರೋ ಒಬ್ಬ ಮಾನ್ಯ ಸದಸ್ಯರು ಕೇರಳದಲ್ಲಿ ಹಾಗೂ ಮದ್ರಾಸಿನಲ್ಲಿ ಹೆಚ್ಚು ಹೆಚ್ಚು ಕೂಲಿಗಾರರು ಇದ್ದಾರೆಂದು ಹೇಳಿದರು. ಇರಬಹುದು, ನಾನು ನೋಡಿದ ಹಾಗೆ ಸುಮಾರು 2–2½ ಲಕ್ಷ ಜನ ಕೂಲಿಗಾರರು ಬೊಂಬಾಯಿನಲ್ಲಿದ್ದಾರೆ. ಅದರಲ್ಲಿ ಸುಮಾರು 50 ಸಾವಿರ ಜನರೇ ನಮ್ಮ ಕನ್ನಡಿಗರು. ಅವರೆಲ್ಲರೂ ಅಲ್ಲಿ ಹೋಗಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಸಣ್ಣ ಸಣ್ಣ ವಿಚಾರಗಳನ್ನು ಮಾತ್ರ ಮುಂದೆ ಮಾಡಿ ಕುಳಿತರೆ ಬಹಳ ದೊಡ್ಡ ದೊಡ್ಡ ಯೋಜನೆಗಳನ್ನು ಸಾಧಿಸುವುದಕ್ಕಾಗುವುದಿಲ್ಲ. ರಾಜ್ಯವನ್ನೂ ಸಹ ಇನ್ನೂ ದೊಡ್ಡದಾಗಿ ಕಟ್ಟುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕನ್ನಡದವರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀ ವಾಟಾಳ್ ನಾಗರಾಜ್ ಅವರು ಒಬ್ಬ ಚಳುವಳಿಗಾರರು.

ಅಧ್ಯಕ್ಷರು.—ಚಳುವಳಿಗೆ ರೂಲ್ಸ್ ಉಂಟು ರೂಲ್ಸ್ ಪ್ರಕಾರ ನಡೆಯದಿದ್ದರೆ ಸ್ವಲ್ಪ ಆತಂಕಗಳು ಬರುತ್ತವೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯಮಂತ್ರಿಗಳು ಬೊಂಬಾಯಿಗೆ ಹೋಗಿ ಬಂದ ವಿಚಾರ ವನ್ನು ಹೇಳಿದರು. ನಾನು ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ.

Mr. SPEAKER.—One Hon'ble Member from the opposition wants to speak. Whatever he wants he can express in his speech if he is given a chance and if there is time. But he should not disturb in middle. No purpose would be served by wasting time like this.

ಶ್ರೀ ಎಸ್. ಶಿವಪ್ಪ.—ಸರ್ಕಾರ ಬಂಡವಾಳಷಾಹಿಗಳ ಮನೆ ಬಾಗಿಲಿಗೆ ಹೋಗುವುದಕ್ಕೆ ಬದಲು ಹೆಚ್ಚಿಗೆ ಏನೇನು ರಿಯಾಯತಿಗಳನ್ನು ಸರ್ಕಾರದವರು ಕೊಡುತ್ತಾರೆನ್ನುವ ಬಗ್ಗೆ ಒಂದು ಅರ್ಜಿ ಮಾಡಿ ಅದನ್ನು ಅವರಿಗೆ ಕಳುಹಿಸಿದರೆ ಅವರೇ ನಮ್ಮ ಮನೆಯ ಬಾಗಿಲಿಗೆ ಬಂದಿದ್ದರೆ ಈ ಸರ್ಕಾರದ ಕೀರ್ತಿ ಇನ್ನೂ ಯಶಸ್ವಿಯಾಗುತ್ತಿತ್ತು.

ಶ್ರೀ ಎಸ್. ನಿಜಲಿಂಗಪ್ಪ.—ಮೈಸೂರು ಸರ್ಕಾರದವರು ಇಂಥ ರಿಯಾಯತಿಗಳನ್ನು ಕೊಡುತ್ತಾರೆಂದು ಹೇಳಿ ನವೆಂಬರ್ ತಿಂಗಳಿನಲ್ಲಿಯೇ ಪ್ರಸಿದ್ಧಿ ಆಯಿತು.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅಲ್ಲಿಗೆ ಹೋಗಿ ಬಂದಮೇಲೆ ಏನಾದರೂ ಒಪ್ಪಂದವಾಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅನೇಕ ಜನರು ಇವತ್ತು ನಮಗೆ ಕೊಡಿ, ನಮಗೆ ಕೊಡಿ, ಎಂದು ಕೇಳುತ್ತಿದ್ದಾರೆ. ನಮಗೆ ಕಾಗದಗಳನ್ನೂ ಸಹ ಬರೆಯುತ್ತಿದ್ದಾರೆ. ಅದರ ಪರಿ ಣಾಮವಾಗಿ ಸಾಕಷ್ಟು ಕೆಲಸಗಳು ಆಗುತ್ತಿವೆ. ಹಣಕ್ಕಾಗಿ ಕೇಂದ್ರ ಸರ್ಕಾರದವರನ್ನೂ, ಮತ್ತು ಬಾಕಿಯವರನ್ನೂ ಕೇಳುತ್ತಿದ್ದೇವೆ. ಬಂದರೆ ಸಾಕು ಎಂಬುದಾಗಿ ದೊಡ್ಡ ದೊಡ್ಡವರು ಅನೇಕ ಜನರು ಕಾದಿದ್ದಾರೆ.

(ಶ್ರೀ ಎಸ್. ನಿಜಲಿಂಗಪ್ಪ)

ನಮ್ಮ ಹೊಸಪೇಟೆಯಲ್ಲಿ ಸ್ಟೀಲ್ ಫ್ಯಾಕ್ಟರಿ ಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಅದಕ್ಕಾಗಿ ಖಾಸಗೀ ದೊಡ್ಡ ಮನುಷ್ಯರು ಬಂದಿದ್ದಾರೆ. ನಾನು ಒಪ್ಪಲಿಲ್ಲ. ಏತಕ್ಕೆಂದರೆ, ಸರ್ಕಾರಿ ಕ್ಷೇತ್ರದಲ್ಲಿ ಮಾಡಿಸೋಣ ಎಂದು ಹಾಗೆಯೇ ಇಟ್ಟಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸ್ಟೀಲ್ ಇಂಡಸ್ಟ್ರಿಸ್ ಖಾಸಗೀಯವರಿಗೆ ಕೊಡಬಹುದೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೊಡಬಹುದು. ಅದು ಏನೂ ತೊಂದರೆ ಅಲ್ಲ. ತಾತಾ ಕಂಪನಿಯವರು ಸ್ಟೀಲ್ ಮಾಡುತ್ತಾ ಇದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದವರು ಏನು ಸಹಾಯ ಮಾಡುತ್ತಾರೆ. ಏಷ್ಟು ಕಾರ್ಖಾನೆ ಇಟ್ಟಿದ್ದಾರೆ ಎನ್ನುವುದನ್ನು ಈ ಕೆಳಗಡೆ ಪರಿಶಿಷ್ಟದಲ್ಲಿ ಕೊಟ್ಟಿದೆ. Bharat Earthmovers Ltd., near K.G.F. for heavy earth moving equipment 2,000 lakhs. ಇದು ಕೆ. ಜಿ. ಎಫ್. ನಲ್ಲಿ ಕೆಲಸ ಮಾಡುವ ಸಂದರ್ಭ ಬಂತು. 4 ವರ್ಷಗಳಿಂದಲೂ ಒಂದೇ ಸಮನೆ ಪ್ರಯತ್ನ ಪಟ್ಟ ಫಲವಾಗಿ ಕೇಂದ್ರ ಸರ್ಕಾರದವರು ಅಲ್ಲಿ ಒಂದು ಕಾರ್ಖಾನೆಯನ್ನು ಹಾಕಿದ್ದಾರೆ. ತುಂಗಭದ್ರ ಸ್ಟೀಲ್ ಪ್ರಾಡಕ್ಟ್ಸ್ ಲಿಮಿಟೆಡ್ ಇದು ಆಂಧ್ರ ಸರ್ಕಾರಕ್ಕೂ ನಮಗೂ ಸಂಬಂಧಪಟ್ಟದ್ದು. ಕೇಂದ್ರ ಸರ್ಕಾರದವರು ಆ ಕಾರ್ಖಾನೆಗಳಲ್ಲಿ ಕ್ರೇನ್ಸ್ ಹಾಯಿಸ್ಟ್ಸ್ (cranes hoists) ತಯಾರು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇದರ ಬಂಡವಾಳ 51 ಲಕ್ಷ ರೂಪಾಯಿ, Kudremukh Iron Ore Project for mining iron ore for export, National Mineral Development Corporation with Japanes Consortium ಇವನ್ನು ಕೇಂದ್ರ ಸರ್ಕಾರದವರು ಮಾಡುತ್ತಾ ಇದ್ದಾರೆ. ಇದರ ಬಂಡವಾಳ 50 ಕೋಟಿ ಖರ್ಚು ಆಗಬಹುದು ಎಂದು ಕಾಣುತ್ತದೆ, ಇದು ನಮ್ಮ ಡಿಪಾರ್ಟ್‌ಮೆಂಟ್, ಕೇಂದ್ರದ ಮೈನಿಂಗ್ ಡಿಪಾರ್ಟ್‌ಮೆಂಟ್ ಮತ್ತು ಜಪಾನ್ ಸರ್ಕಾರ ಸೇರಿ ಮಾಡಿರುವುದು. Pelletisation plant at Donimali near Hospet. National Mineral Development Corporation with German Collaboration. ಇದರ ಖರ್ಚು 19 ಕೋಟಿ ರೂಪಾಯಿ ಮತ್ತು Cement Factory at Sedum by Cement Corporation of India ಇದರ ಖರ್ಚು 5 ಕೋಟಿ ರೂಪಾಯಿ. ಇದೇ ರೀತಿ ಕೇಂದ್ರ ಸರ್ಕಾರದವರು ದೊಡ್ಡ ದೊಡ್ಡ ಕಾರ್ಖಾನೆ ಹಾಕುವುದಕ್ಕೆ ಒಪ್ಪಿದ್ದಾರೆ. ಕೆಲವು ಇನ್ನೂ ವಿಚಾರದಲ್ಲಿದೆ. ಮುಂದೆ ಆಗುತ್ತದೆ. ಈ ರೀತಿಯಲ್ಲಿ ಬರುವುದಾದರೆ ಶರಾವತಿ ವಿದ್ಯುಚ್ಛಕ್ತಿ ಮುಂದೆ ಉಪಯೋಗಕ್ಕೆ ಬರುವ ಸ್ಥಿತಿಯಲ್ಲಿದೆ. ಶರಾವತಿ ವಿದ್ಯುಚ್ಛಕ್ತಿಯಲ್ಲಿ ಜಾಸ್ತಿ ಉತ್ಪನ್ನವಾದಂಥಾದ್ದನ್ನು ಕಾರ್ಖಾನೆಯವರಿಗೆ ಮಾರಿ 4-5 ಕೋಟಿ ರೂಪಾಯಿ ಸಂಪಾದನೆ ಮಾಡಬಹುದು. ಇನ್ನು ಮೈಸೂರು ಸರ್ಕಾರದವರು ಮಾಡಬೇಕೆಂದು ಯೋಚಿಸಿರುವ ಉದ್ಯಮಗಳು. ಮೈಸೂರ್ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ ಅದನ್ನು ಜಾಸ್ತಿ ಮಾಡುತ್ತಾ ಇದ್ದೇವೆ. ಇದರ ಬಂಡವಾಳ 5 ಕೋಟಿ ರೂಪಾಯಿ, ಇನ್ನೂ ಹೆಚ್ಚಿಗೆ 5 ಕೋಟಿ ; ಎನ್. ಜಿ. ಇ. ಎಫ್. ಲಿಮಿಟೆಡ್‌ಗೆ 40 ಲಕ್ಷ ಪೋರ್ಸ್‌ಲೈನ್ ಫ್ಯಾಕ್ಟರಿಗೆ 50 ಲಕ್ಷ. ನಮ್ಮ ಕಾರ್ಖಾನೆಗಳನ್ನು ಖಾಸಗೀ ಕ್ಷೇತ್ರಕ್ಕೆ ಟ್ರಾನ್ಸ್‌ಫರ್ ಮಾಡುತ್ತಾರೆ ಎನ್ನುವ ಅಪಾದನೆ ಮಾಡುತ್ತಿದ್ದಾರೆ. ಯಾವ ಕಾರ್ಖಾನೆಗಳಾಗಲೀ ಖಾಸಗೀ ಕ್ಷೇತ್ರಕ್ಕೆ ನಮ್ಮ ಕಾರ್ಖಾನೆಗಳನ್ನು ಕೊಟ್ಟಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಂತೆ ಇರುವ ಕಾರ್ಖಾನೆಗಳನ್ನು ದೊಡ್ಡದು ಮಾಡಿ ಪಬ್ಲಿಕ್ ಲಿಮಿಟೆಡ್ ಕನ್‌ಸರ್ನ್ಸ್ ಆಗಿ ಮಾಡಿ ಅವರಿಗೆ ಕೊಡುತ್ತಿದ್ದೇವೆ. ಅದೇ ರೀತಿ ಎನ್. ಜಿ. ಇ. ಎಫ್. ಗೆ 40 ಲಕ್ಷ ರೂಪಾಯಿ ಹಾಕಬೇಕಾಗುತ್ತದೆ.

Sri M. S. KRISHNAN.—Your share is decreasing in some of them and share of enterprising people is increasing. Is it not opposed to Government policy.

		(Rs. in lakhs)	
		Under implementation.	*In the planning Stage.*
Radio and Electricals Manufacturing Company.	...	70	...
Acetic Acid Plant (Mysore Sugar Co.,)	...	45	...
Mysore Sugar Company Expansion.	...	160	...
Mysore Industrial and Testing Laboratory	...	20	...
Chitradurga Copper Co. Ltd., (Ingaldhal).	...	10	...
Mysore Cosmetics Ltd., (Bangalore)	...	10	...
Mysore Asbestos Ltd., (Holenarasipur)	...	10	...
Ferro-Chrome (Bhadravati)	...	...	300
Co-operative Fertiliser Factory, Bellary.	...	...	100
Sillicon Carbide.	...	...	100
Co-operative Textile Mils (4) Bijapur, Bagalkot. Belgaum and Raichur).	...	280	...
Co-operative Sugar Mills (Hiriyur, Mugutkhan-Hubli and Bidar).	...	450	..
Tartaric Acid Industry (Kolar District).	...	...	10
Rayon and Paper Pulp Plan (Karwar District)	...	...	1,200
Caustic Soda *cum* Fertiliser Plan (Karwar District)	...	...	950
Salt Refinery—(Gokarn).	..	...	50

ಈ ರೀತಿಯಾಗಿ ದೊಡ್ಡದು ಸಣ್ಣದು ಕಾರ್ಖಾನೆಗಳನ್ನು ಮಾಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಇನ್ನೂ ಒಂದು ಮಾತು ಹೇಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಸ್ ಏನು ಇವೆ ಸಾಕಷ್ಟು ಇವೆ. ಅವುಗಳಿಗೂ ಕೊರತೆ ಇದೆ ಎಂದು ಬಹಳ ಜನ ಕೇಳುತ್ತಿದ್ದಾರೆ. ಇನ್ನು ಇಂಡಸ್ಟ್ರಿಯಲ್ ಎಸ್ಟೇಟ್ಸ್ ಕಟ್ಟಿಸಿದ್ದೇವೆ. ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ಹೇಳಬೇಡಿ. 20 ಜನ ಮುಂದೆ ಬಂದು ಅವಕಾಶ ಮಾಡಿ ಕೊಡಿ ಎಂದು ಬರುತ್ತಿದ್ದಾರೆ. ನಾವು ಮಾಡಿ ಕೊಡುತ್ತೇವೆ ಎಂದು ಹೇಳಿದ್ದೇವೆ. ಒಂದು ಅಸಂತೋಷದ ಮಾತು, ಏನೆಂದರೆ, ಎಷ್ಟು ಉತ್ತೇಜನ ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಲಿಲ್ಲ. ಅದನ್ನು ಒಪ್ಪಿಕೊಳ್ಳಬೇಕು. ಆನ್ಸಿಲರಿ ಇಂಡಸ್ಟ್ರಿಸ್ ಮಾಡಬೇಕಾದ್ದು ಬಹಳ ಇದೆ. ಅವುಗಳನ್ನು ಅನುಕೂಲ ಮಾಡಿದಷ್ಟೂ ಇನ್ನು ಅನುಕೂಲವಾಗುತ್ತದೆ. ಆದರಿಂದ ಹೆಚ್ಚು ಜನಗಳಿಗೆ ಉದ್ಯೋಗ ಸಿಕ್ಕುತ್ತದೆ. ಈ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದೇವೆ. ಹೆಚ್ಚು ಖಾಸಗಿ ಕ್ಷೇತ್ರಗಳಿಗೆ ಉತ್ತೇಜನ ಕೊಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅವರಿಗೆ ಲೋನ್ ಕೊಟ್ಟು ಅವರು ಮಾಡಿದಂಥ ವಸ್ತುಗಳನ್ನು ಸರ್ಕಾರ ತೆಗೆದುಕೊಳ್ಳಬೇಕು ಎನ್ನುವುದು ಅವರ ಇಚ್ಛೆ.

ಶ್ರೀ ಎಸ್. ನಿಜಲಿಂಗಪ್ಪ.—ಕಾನೂನು ಮಾಡಿದ್ದೇವೆ. ಕಾಟೇಜ್ ಇಂಡಸ್ಟ್ರಿಸ್‌ನಲ್ಲಿ ತಯಾರಾದ ಸಾಮಾನುಗಳಿಗೆ ಶೇಕಡ 15 ರಷ್ಟು ಜಾಸ್ತಿ ಇದ್ದರೂ ಅದನ್ನು ತೆಗೆದುಕೊಳ್ಳಿ ಎಂದು ನಮ್ಮ ಡಿಪಾರ್ಟ್‌ಮೆಂಟಿಗೆ ಹೇಳಿದ್ದೇವೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಶೇಕಡ 10 ರಷ್ಟು

(ಶ್ರೀ ಎಸ್. ನಿಜಲಿಂಗಪ್ಪ)

ಜಾಸ್ತಿ ಆದರೂ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಮೊದಲು ಅವರಿಗೆ ಆದ್ಯತೆ ಕೊಟ್ಟು ಬಾಕಿಯವರಿಗೆ ಆಮೇಲೆ ಆದ್ಯತೆ ಕೊಡಿ ಎಂದು ಆರ್ಡರ್ ಆಗಿದೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಎಂದು ಕಾಣುತ್ತದೆ. ಇನ್ನು ಖಾಸಗೀ ಕ್ಷೇತ್ರದಲ್ಲಿ.

		Under implementation.	In planning stage.
		(Rs. in lakhs)	
Aluminium factory (Belgaum)	...	5000	...
Fertiliser Factory (Mangalore)	...	5250	...
Acetate and Chemicals Ltd., (Mandya)	...	750	...
Rayon Plant (Birla's) (Harihar or Hospet)	...	...	500
Aluminium Extrusion and Cable making units)	...	...	300
Phosphoric Acid Plant (Mangalore)	...	...	150
Copper Chemicals (Chitradurga)	...	...	20
Agricultural Chemicals.	...	...	25
Copper Smelter (Chitradurga)	...	...	200
ಇನ್ನು ಪವರ್ ಟಿಲ್ಲರ್ (ಬೆಂಗಳೂರು 60 ಲಕ್ಷ. ನಿನ್ನೆ ಜಪಾನ್	...	...	...
ನಿಂದ ಬಂದು ಮಾತನಾಡಿ ಹೋಗಿದ್ದಾರೆ. ಸರ್ಕಾರದ ಸಹಾಯ	...	...	...
ಏನು ಬೇಕೋ ಅದನ್ನು ಕೇಳಿ ಕೊಡುತ್ತೇವೆ ಎಂದು ಹೇಳಿದ್ದೇವೆ	...	...	...
Rubber and plastic Machinery (German Company)	...	60	...
Pharmaceutical and Chemicals Manufacture (Smith, Klein and French American Company)	...	...	50

ಇನ್ನು ಸಿಮೆಂಟ್ ಪ್ಲಾಂಟ್ಸ್ 4 ಕೋಟಿ ರೂಪಾಯಿ. ನಮ್ಮವರೇ ಇಂದು ಮಾಡುತ್ತಾರೆ. 3 ದಿನಗಳ ಕೆಳಗೆ ಎರಡು ಪಾರ್ಟಿಗಳು 2 ಕೋಟಿ 2 ಕೋಟಿ ಹಾಕುತ್ತೇವೆ ಎಂದು ಇಬ್ಬರೂ ಬಂದಿದ್ದರು. ಅವರು ಗುಲ್ಬರ್ಗದ ಕಡೆಯವರು. ಅವರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ಟೆಕ್ಸ್‌ಟೈಲ್ ಮಿಲ್ಸ್ (ಇಲ್ಕಲ್ ಅಂಡ್ ಬೆಂಗಳೂರು) 140 ಲಕ್ಷ ಆಗಿದೆ. ಹೀಗಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ 50 ಲಕ್ಷ ಕೊಡುತ್ತಿದ್ದೇವೆ. ಇದು ಏತಕ್ಕೂ ಸಾಲದು. ಮತ್ತೆ 150 ಲಕ್ಷ ಕೊಟ್ಟು ಸಾಕಷ್ಟು ಸಹಾಯ ಮಾಡಬೇಕೆಂಬುದು ಸರ್ಕಾರದ ಉದ್ದೇಶ. ಇನ್ನು ಪ್ರೈವೇಟ್ ಸೆಕ್ಟರ್‌ನಲ್ಲಿ 5 ಕೋಟಿ ರೂಪಾಯಿಗೆ ಮಾಡತಕ್ಕ ಕೆಲಸಗಳು ಇವೆ. ಅಂಡರ್ ಇಂಪ್ಲಿಮೆಂಟೇಷನ್ ಸೆಂಟ್ರಲ್ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ 2551 ಲಕ್ಷ. ಕೇಂದ್ರ ಸರ್ಕಾರದವರು ಯೋಚನೆ ಮಾಡುತ್ತಾ ಇರತಕ್ಕದ್ದು 6,900 ಲಕ್ಷ. ಮೈಸೂರು ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ ಈಪ್ರೊತ್ತು ಕೆಲಸ ಆಗುತ್ತಾ ಇರುವುದು 1,055 ಲಕ್ಷ. ಪ್ಲಾನಿಂಗ್ ಸ್ಟೇಜ್‌ನಲ್ಲಿ ಇರುವುದು 3,300 ಲಕ್ಷ. ಪ್ರೈವೇಟ್ ಸೆಕ್ಟರಿನಲ್ಲಿ 112 ಕೋಟಿ ಕೆಲಸ ಆಗುತ್ತಾ ಇರುವುದು, ಪ್ಲಾನಿಂಗ್ ಸ್ಟೇಜ್‌ನಲ್ಲಿರುವುದು 1,725 ಲಕ್ಷ. ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಕೆಲಸ ಆಗುತ್ತಾ ಇರುವುದು 50 ಲಕ್ಷ, ಪ್ಲಾನಿಂಗ್ ಸ್ಟೇಜ್‌ನಲ್ಲಿ ಇರುವುದು 650 ಲಕ್ಷ. ಈ ರೀತಿ ಕೆಲಸ ಮಾಡಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ಕೆಲಸ ಆಗುತ್ತಾ ಇದೆ. ಕೆಲವು ಪೂರೈಸತಕ್ಕ ಸಂದರ್ಭ ಇದೆ. ಶರಾವತಿಯಲ್ಲಿ ಎಲೆಕ್ಟ್ರಿಸಿಟಿ ಏನು ಉತ್ಪತ್ತಿಯಾಗುತ್ತದೋ ಅದು 3-4 ವರ್ಷದೊಳಗೆ 10 ಜನರೇಟರುಗಳು ಪೂರೈಸುತ್ತದೆ. ಅದರಿಂದ

9 ಲಕ್ಷ ಕಿಲೋವಾಟ್ಸ್‌ಗಳು ಉತ್ಪತ್ತಿಯಾಗುತ್ತದೆ. ಅದು ಕಡಿಮೆ ಬೀಳಲಿ ಎಂದು ನನ್ನ ಅಭಿಪ್ರಾಯ. ಇನ್ನೂ 2½ ಲಕ್ಷ ಕಿಲೋವಾಟ್ಸ್‌ಗಳು ಉತ್ಪತ್ತಿಯಾಗುವುದು ಇದೆ. ಅದು ಪೂರೈಸಿ ಜಾಸ್ತಿ ಬರುವಂತೆ ಆಗಲಿ ಎಂದು ಆಶಿಸುತ್ತೇನೆ. ಇದನ್ನು ನಾವು ಕೈಗಾರಿಕೆ ಎಂದು ತಿಳಿದುಕೊಳ್ಳಬೇಕು. ಕಾಳೀ ನದಿಯಲ್ಲಿ ಉತ್ಪತ್ತಿ ಮಾಡಿದರೆ 13½ ಲಕ್ಷ ಕಿಲೋವಾಟ್ಸ್ ಆಗುವ ಸಂದರ್ಭ ಇದೆ.

11–30 A.M.

ಆದ್ದರಿಂದ ಎರಡನ್ನೂ ಮಾಡುವುದು ಅವಶ್ಯಕ. ಎರಡನ್ನೂ ಮಾಡುವುದಕ್ಕೆ ಕೇಂದ್ರ ಸರ್ಕಾರದ ಸಹಾಯ ಸಿಕ್ಕುವಂತೆ ಕಾಣುತ್ತದೆ. ಏಕೆಂದರೆ ಅವರಿಗೂ ವಿದ್ಯುಚ್ಛಕ್ತಿ ಬೇಕಾಗಿದೆ. ನಮಗೆ ಯಾವ ರೀತಿಯಲ್ಲೂ ಲುಕ್ಸಾನು ಆಗುವುದಿಲ್ಲ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಮಾರೋಣ ಆದರೂ ಉತ್ಪತ್ತಿಯಾಗುವ ಪವರನ್ನು ನಮ್ಮಲ್ಲಿಯೇ ಖರ್ಚಾಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಹೆಚ್ಚಿನದ್ದನ್ನು ಮಾರೋಣ. ಬಹುಶಃ ಕೈಗಾರಿಕೆ ಮತ್ತು ವ್ಯವಸಾಯದ ಬಗ್ಗೆ ಪೂರ್ತಿಯಾದಂತೆ ಆಯಿತು.

ಮಾನ್ಯ ಸದಸ್ಯರೊಬ್ಬರು ಒಂದು ಮಾತನ್ನು ಹೇಳಿದರು. ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡುವ ವಿಚಾರದಲ್ಲಿ ರಾಜಕೀಯ ನಡೆಯುತ್ತಿದೆಯೆಂದು. ಅದು ತಪ್ಪು. ಇವರನ್ನು ನೇಮಕ ಮಾಡುವಾಗ ಜಿಲ್ಲಾಧಿಕಾರಿಗಳನ್ನು, ಡಿಸ್ಟ್ರಿಕ್ಟ್ ಜಡ್ಜ್ ಅವರನ್ನು ಕೇಳುತ್ತೇವೆ. ಇವರಿಬ್ಬರೂ ಒಂದೇ ಹೆಸರನ್ನು ಕಳಿಸಿದರೆ ಕೂಡಲೆ ನೇಮಕ ಮಾಡುತ್ತೇವೆ. ಇವರಿಬ್ಬರೂ ಬೇರೆ ಬೇರೆ ಹೆಸರುಗಳನ್ನು ಕಳಿಸಿದರೆ, ಮೊದಲನೆಯ ಸ್ಥಾನವನ್ನು ಯಾರಿಗೆ ಕೊಡಬೇಕು ಎಂಬುದನ್ನು ವಿಚಾರ ಮಾಡುತ್ತೇವೆ. ಅವರ ಜೀವನ ಚರಿತ್ರೆಯನ್ನು ಸಹ ಕಳಿಸಿರುತ್ತಾರೆ. ಈ ರೀತಿ ನೇಮಕ ಮಾಡುವಾಗ ನಮ್ಮವರಿಗೆ ಕೊಡಬೇಕು ಎಂಬುದೇನೂ ಇಲ್ಲ. ಆ ರೀತಿಯೇನಾದರೂ ನಡೆದಿದ್ದರೆ ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದರೆ ವಿಚಾರ ಮಾಡೋಣ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇಂತಹವರಿಗೇ ನೇಮಕ ಮಾಡಬೇಕೆಂದು ಟೆಲಿಫೋನ್ ಮೂಲಕ ತಾವು ಹೇಳಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹೇಳಿಲ್ಲ ಏನಾದರೂ ಆ ರೀತಿ ನಡೆದಿದ್ದರೆ ನನ್ನ ಗಮನಕ್ಕೆ ತರಬಹುದು.

Sri DIGAMBAR RAO BALWANT RAO.—I can give instances in Gulbarga.

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀಮಾನ್ ದಿಗಂಬರ್‌ರಾವ್ ಅವರು ನನಗೆ ತಿಳಿಸಿದರೆ ನಾನು ವಿಚಾರ ಮಾಡುತ್ತೇನೆ.

Mr. SPEAKER.—Names should not be mentioned on the floor of the House. No one should mention names because they will not be here to defend themselves. That is why names are excluded.

Sri S. NIJALINGAPPA.—If Mr. Digambar Rao brings the names to my notice, I will have it investigated Sir.

ಶ್ರೀ ಬಿ. ಪಿ. ಗಂಗಾಧರ್.—ಎಲ್ಲಾ ಊರಿನಲ್ಲೂ ಇದೇ ರೀತಿಯಾಗುತ್ತಿದೆ. ತುಮಕೂರಿನಲ್ಲೂ ಆಗಿದೆ.

Mr. SPEAKER.—It is not fair for Hon'ble Members to interrupt like this. I have been showing certain amount of latitude, but if there are too many interruptions, I will have to enforce the rule and ask the member who interrupts to retire. Hence I request all the members to please not to put me to that necessary.

Sri H. SIDDAVEERAPPA.—The point is, why should Government try to bring the names of other officers into the appointment of Public Prosecutors, which the Government is expected to do? If I were there, I would not bring in officers into this affair. It is the responsibility of the Government to appoint public prosecutors. Why should any officers be brought into this field ?

Mr. SPEAKER.—Mr. Siddaveerappa has answered all the points raised.

Sri H. SIDDAVEERAPPA.—I was saying that it is not right to bring the names of officers. It is the Leader of the House who mentioned names.

Mr. SPEAKER.—He mentioned procedure.

Sri S. NIJALINGAPPA.—The District Judge is not under my control and the Deputy Commissioners cannot be ordered to send in particular names. 'ಸಂಶಯಾತ್ಮ ವಿನಶ್ಯತಿ.' ಎಂದು ನಾನು ಆಗಲೇ ಹೇಳಿದೆ. ತಾವು ಅನುಮಾನ ಪಟ್ಟುಕೊಂಡು ದೇಶದ ಜನರಿಗೂ ಅನುಮಾನ ಬರುವಂತೆ ಮಾತನಾಡುತ್ತೀರಿ.

ಅವರು ಹೇಳುವುದು ಬಹಳ ಆಶ್ಚರ್ಯವಾಗಿ ಕಾಣುತ್ತಿದೆ. ಶ್ರೀ ಸಿದ್ದವೀರಪ್ಪನವರು ಮರೆತಿರುವಂತೆ ಕಾಣುತ್ತದೆ. ನಾವು ನೇಮಕ ಮಾಡುವ ವಿಧಾನವೇ ಹೀಗೆ. ಯಾವ ಮಂತ್ರಿಗಳು ಸಹ ಅವರು ಯಾವ ರೀತಿ ಕೆಲಸ ಮಾಡುತ್ತಾರೆಂದು ಹೋಗಿ ನೋಡುವುದಿಲ್ಲ. ಇದರಲ್ಲಿ ಯಾವ ಅಕ್ಷೇಪಣೆಯೂ ಇಲ್ಲ. ಡಿಸ್ಟ್ರಿಕ್ಟ್ ಜೆಡ್ಜ್ ಆಗಲಿ, ಜಿಲ್ಲಾಧಿಕಾರಿಗಳಾಗಲಿ ನಾವು ಹೇಳಿದಂತೆ ಕೇಳುವುದಿಲ್ಲ. ಅವರು ಹೇಳಿದಂತೆ ಅಂದರೆ, ವಿಚಾರ ಮಾಡಿ ನಾವು ನೇಮಕ ಮಾಡುತ್ತೇವೆ.

ಇನ್ನು ಹನುಮನಮಟ್ಟಿಯಲ್ಲಿರುವ ವಿದ್ಯಾಸಂಸ್ಥೆಯ ವಿಚಾರವಾಗಿ ಶ್ರೀ ಕೆ. ಎಚ್. ಪಾಟೀಲರು ಹೇಳಿದರು. ಇದು ನಮಗೆ ಹೊಸದು. ಎರಡು ವರ್ಷವಾಯಿತೆಂದು ಕಾಣುತ್ತದೆ. ನಾನು ಹುಬ್ಬಳ್ಳಿಯಿಂದ ಬರುತ್ತಿರುವಾಗ...............

Mr. SPEAKER.—I am tcld it is under investigation.

Sri K. H. PATIL.—There is one particular point on which there is investigation.

Sri S. NIJALINGAPPA.—I will tell him what it is. ನಾನು ಹುಬ್ಬಳ್ಳಿಯಿಂದ ವಾಪಸ್ ಬರುತ್ತಿರುವಾಗ ಹನುಮನಮಟ್ಟಿಯ ಹತ್ತಿರ ಸುಮಾರು 30 ಹುಡುಗರು ರಸ್ತೆಯಲ್ಲಿ ಕುಳಿತು ಉಪವಾಸ ಮಾಡುತ್ತಿದ್ದರು. ಏತಕ್ಕೆ ಉಪವಾಸ ಮಾಡುತ್ತಿದ್ದೀರಿ ಎಂದು ಕೇಳಿದಾಗ, ಅವರು ನಮ್ಮ ಸ್ಕೂಲಿಗೆ ಬಂದು ನೋಡಿ, ಅಲ್ಲಿ ನಮ್ಮನ್ನು ಕೇಳುವವರು ಯಾರೂ ಇಲ್ಲ ಎಂದು ಹೇಳಿದರು. ಅದಕ್ಕೆ ನಾನು ಆ ಸಂಸ್ಥೆಗೂ ನನಗೂ ಸಂಬಂಧವಿಲ್ಲವೆಂದು ಹೇಳಿದೆ. ಅದನ್ನು ಕೇಂದ್ರ ಸರ್ಕಾರದವರು ನಡೆಸುತ್ತಿದ್ದಾರೆ. ಎರಡಾಣೆ ಭಾಗ ಅಂದರೆ ಹನ್ನೆರಡೂವರೆ ಪರ್‌ಸೆಂಟನ್ನು ಮಾತ್ರ ನಾವು ಕೊಡುತ್ತಿದ್ದೇವೆಂದು ಹೇಳಿದೆ. ಅದಕ್ಕೆ ಅವರು ತಾವು ಏನಾದರೂ ಮಾಡಬೇಕೆಂದು ಕೇಳಿದರು. ನಾನು ಅವರಿಗೆ ಸಮಾಧಾನ ಮಾಡಿ ಬಂದೆ. ಇದರಲ್ಲಿ ನಮ್ಮ ಕೈವಾಡವೇನೂ ಇಲ್ಲ. ಕೇಂದ್ರ ಸರ್ಕಾರದವರು ಈಗ ಅಲ್ಲಿ ನಡೆಯುತ್ತಿರುವ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಇಲ್ಲಿ ಹಣ ದುರುಪಯೋಗವಾಗಿದೆಯೆಂದು ಎರಡು ಪ್ರಾಸಿಕ್ಯೂಷನ್ ಹಾಕಿದ್ದೇವೆಂದು ಹೇಳಿದರು.

Sri K. H. PATIL.—The Hon'ble Minister Sri S. R. Kanthi has assured the House that all papers will be laid on the Table for the information of the House. When those papers are not yet laid, is it proper to raise this point here Sir?

Mr. SPEAKER.—When it was referred to by the Hon'ble Member, the Hon'ble Minister for Law intervened and I said that instead of every body having doubts and consuming time on ascertaining details on the floor of the House, I said a copy of the papers may be placed on the Table of the House. But did Sri K. H. Patil pursue that matter ?

Sri K. H. PATIL.—Yes Sir, I pursued it in my speech

Mr. SPEAKER.—A copy of the order or papers relating to that may be placed on the Table because whenever money is sanctioned by this House on any particular scheme, the House will have a right to know what that scheme is.

Sri S. NIJALINGAPPA.—The whole scheme has been worked out and approved by the Central Government. We only contribute $12\frac{1}{2}$ per cent.

Sri H. M. CHANNABASAPPA.—A note explaining the circumstances may be placed on the Table Sir.

Sri S. NIJALINGAPPA.—Whatever is possible, I will place.

Sri ALLUM KARIBASAPPA (Kurugod).—I want to know whether the Hon'ble Member, Sri K. H. Patil is in any way connected with these cases?

Sri S. NIJALINGAPPA.—Two cases have been launched and I think the Hon'ble Member is also one of them.

ಕೋರ್ಟಿನಲ್ಲಿ ಕೇಸಾಗಿದೆ. ಅದರ ಬಗ್ಗೆ ನಮಗೆ ಒಂದು ನೋಟ್ ಬಂದಿದೆ. ನಾವು ಆ ಸಂಸ್ಥೆಗೆ ಹನ್ನೆರಡೂವರೆ ಪರ್ ಸೆಂಟ್ ಮಾತ್ರ ಸಹಾಯಧನ ಕೊಡುತ್ತಿರುವುದು. ಆ ಸಂಸ್ಥೆಗೆ ಒಬ್ಬ ಅಧಿಕಾರಿ ಬೇಕೆಂದು ಕೇಳಿದರು. ನಾವು ಕಳಿಸಿದ್ದೆವು. ಈಗ ಆ ಅಧಿಕಾರಿಯೂ ಸಹ ವಾಪಸ್ ಬಂದುಬಿಟ್ಟ. ಇನ್ನು ಹನುಮನಮಟ್ಟಿ ವಿಚಾರದಲ್ಲಿ ಹೇಳುವುದೇನೂ ಇಲ್ಲ.

ಶ್ರೀ ಬಿ. ಎಸ್. ಪಾಟೀಲ್ (ಬಾಗೇವಾಡಿ).—ಹನುಮನಮಟ್ಟಿ ವಿದ್ಯಾಸಂಸ್ಥೆ ಬಗ್ಗೆ ತಮಗೆ ಹೆಚ್ಚಿನ ಸಂಬಂಧವಿಲ್ಲವೆಂದು ಬಿಡಬಾರದು, ಏಕೆಂದರೆ ಅದು ಒಂದು ದೊಡ್ಡ ಸಂಸ್ಥೆ.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಖಾದಿ ಬೋರ್ಡಿನ ವಿಚಾರ ಆಗಿಂದಾಗ್ಗೆ ಬರುತ್ತಿದೆ. ಅದು ಈಗಲೇ ಮುಗಿಯುವುದಿಲ್ಲವೆಂದು ಕಾಣುತ್ತದೆ. ಶ್ರೀ ಸಿದ್ಧವೀರಪ್ಪನವರಿಗೂ ಗೊತ್ತಿರಬಹುದು. ಅವರೂ ಸಹ ಮೂರು ವರ್ಷದವರೆಗೆ ಅಂದರೆ 4ನೇ ಅಕ್ಟೋಬರ್, 1963ರ ವರೆಗೆ ಖಾದಿಬೋರ್ಡಿನಲ್ಲಿದ್ದರು. ಅವರಿಗೆ ಹಿಂದೆ ಮತ್ತೊಬ್ಬರು ಇದ್ದರು. ಈಗ ಮತ್ತೊಬ್ಬ ದೊಡ್ಡ ಮನುಷ್ಯರಿದ್ದಾರೆ. ಖಾದಿಬೋರ್ಡಿನ ಲೆಕ್ಕ ಮೊದಲು ಸುಮಾರು ಮೂರು ವರ್ಷದವರೆಗೂ ಇರಲೇ ಇಲ್ಲ, ಲೆಕ್ಕವೇ ಇರಲಿಲ್ಲ. ವೌಚರಗಳು ಇದ್ದುವು. ಈ ಸಭೆಯಲ್ಲಿ ಈ ಕಡೆ ಬಂದ ಮೇಲೆ ಅದನ್ನು ವಿಚಾರಮಾಡಿ, ಏನಾಗಿದೆ ಎಂದು ಲೆಕ್ಕವನ್ನು ಬರೆಸಿ ಎಲ್ಲವನ್ನೂ ತರಿಸಿದ್ದೇವೆ. ಇವತ್ತು ವಿಚಾರಣೆ ನಡೆಯುತ್ತಿದೆ. ಅದರಲ್ಲಿ ಸಾಕಷ್ಟು ಜನ ದುಡ್ಡು ತಿಂದಿದ್ದಾರೆ ಎಂದು ಕಾಣುತ್ತದೆ. ಅದಕ್ಕೆ ಮಿತಿ ಇರುವ ಹಾಗೇ ಕಾಣಲಿಲ್ಲ. ಎಲ್ಲದಕ್ಕೂ ಚೇರ್‌ಮನ್ ಆಗಿದ್ದವರನ್ನೇ ಗುರಿ ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಇಲ್ಲಿಗೆ ಬಂದ ಮೇಲೆ, ಖಾದಿ ಬೋರ್ಡ್ ಪ್ರಕರಣ ಗೊತ್ತಾಯಿತು ಎಂದು. ನಾನು ಖಾದಿ ಬೋರ್ಡ್ ಚೇರ್‌ಮನ್ ಆದಮೇಲೆ ಮೊದಲು ದಿವಸ ಬಹುಶಃ, ಒಂದು ವಾರದಲ್ಲಿ ಒಂದು ಪತ್ರವನ್ನು ಬರೆದಿದ್ದೇನೆ. ಖಾದಿ ಬೋರ್ಡಿನಲ್ಲಿ ಲೆಕ್ಕವಿಲ್ಲ. ಯಾವುದೂ ಇಲ್ಲ, ಯಾವುದನ್ನೂ ಸರಿಯಾಗಿ ಬರೆದಿಲ್ಲ, ಸರಿಯಾದ ವಿವರಗಳಲ್ಲಿ, ತನಿಖೆ ಮಾಡಿಸಬೇಕು ಎನ್ನುವುದನ್ನು ಬರೆದಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಕೆಲವು ದಿವಸ ಮಾಲಿ ಮರಿಯಪ್ಪನವರಿದ್ದರು. ನಂತರ ವೀರೇಂದ್ರ ಪಾಟೀಲರು ಬಂದರು. ಆನಂತರ ದಿವಂಗತ ಕೆ. ಮಲ್ಲಪ್ಪನವರು ಬಂದರು, ಪ್ರತಿದಿನ ಕ್ವೆರಿ ಹಾಕಿ ಈ ರೀತಿ ಇದೆ, ಲೆಕ್ಕಗಳಿಲ್ಲ, I am groping in darkness ಏನು ಮಾಡಬೇಕೆನ್ನುವುದು ಗೊತ್ತಾಗುತ್ತಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ಆಗಿಂದಾಗ್ಗೆ ತಂದಿದ್ದೇನೆ. ಈ ಒಂದು ವಿಷಯವನ್ನು by way of personal explanation ಹೇಳಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಇವರು ಬಿಟ್ಟಾಗಲೂ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರೇ ಅಲ್ಲಿ ಹೇಗೆ ಹೇಗೊ ನಡೆದು ಹೋಗಿದೆ ಎಂದು ಹೇಳಿದ್ದಾರೆ. ಅದನ್ನೆಲ್ಲ ಈಗ ಒಂದು ತಹಬಂದಿಗೆ ತಂದಿದ್ದೇವೆ. ಈಗಾಗಲೇ ಸುಮಾರು ಪ್ರಾಸಿಕ್ಯೂಷನಗಳು ನಡೆದಿವೆ, ಕೆಲವರು ದುಡ್ಡು ತಿಂದಿದ್ದಾರೆ ಎಂದು 17 ಕೇಸುಗಳು ಇದುವರೆಗೂ ಸಿಕ್ಕಿವೆ.

There are 23 other cases involving Board Officers, under investigation and trial. There are about 100 cases wherein police complaints are lodged or are to be lodged after due administrative enquire and audit. ಖಾದಿ ಬೋರ್ಡ್ ಪ್ರಾರಂಭವಾಗಿ ಸುಮಾರು ಹತ್ತು ವರ್ಷಗಳಾದುವು. ಇದರ ವಿಚಾರ ಈ ಮನೆಯಲ್ಲಿ ಆರುವರ್ಷದಿಂದ ಬರುತ್ತಿದೆ. ಇದನ್ನೆಲ್ಲ ವಿಚಾರ ಮಾಡಬೇಕು ಎಂದು ಹಿಂದಿನ ಲೆಕ್ಕಗಳನ್ನೆಲ್ಲ ಸಿದ್ಧವಾಗಿದ್ದ ವಾಚರುಗಳ ಸಹಾಯದಿಂದ ಲೆಕ್ಕ ಬರೆಸಿದ್ದೇನೆ. ಇದರ ಪರಿಣಾಮವಾಗಿ ಯಾರೇ ಆಗಲೀ ಇದರ ವ್ಯವಹಾರ ಸರಿಯಾಗಿ ನಡೆದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೊಲಸು ಇದೆ ಎಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅದರೂ ಪ್ರತಿವರ್ಷವೂ ದುಡ್ಡು ಕೊಡುತ್ತಾ ಇದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಲೆಕ್ಕ ಬರೆಸಿದ್ದೇವೆ, ಆಡಿಟ್ ಆಗಿದೆ, ತನಿಖೆ ಆಗಿದೆ. ಯಾರ ಮೇಲೆ ಜವಾಬ್ದಾರಿ ಹೊರಿಸಬೇಕು ಎಂದು ಇನ್‌ವೆಸ್ಟಿಗೇಷನಲ್ಲಿರಬೇಕಾದರೆ ಯಾರನ್ನು ಬಟ್ಟಿಡುವುದಕ್ಕೆ ಹೋಗಬೇಕು? ಹತ್ತು ವರ್ಷದ ಲೆಕ್ಕಗಳನ್ನು ಬರೆಸಿದ್ದೇವೆ. ಈಗ 23 ಕೇಸುಗಳು ಸಿಕ್ಕಿವೆ. ಬಾಕಿಯದನ್ನು ಹುಡುಕುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಹಿಂದಿನ ಮೂರುವರ್ಷದ ಲೆಕ್ಕವಿರಲಿಲ್ಲ ಎನ್ನುವುದು ನನಗೆ ಗೊತ್ತಿದೆ. ನಾನು ಅಧ್ಯಕ್ಷನಾದಮೇಲೆ ಲೆಕ್ಕಗಳನ್ನು ಬರೆಸಿದ್ದು ಇದೆ.

ಶ್ರೀ ಎಸ್ ನಿಜಲಿಂಗಪ್ಪ.—ಹತ್ತು ವರ್ಷಗಳ ಲೆಕ್ಕ ಒಂದಕೊಂದಕ್ಕೆ ಸಂಬಂಧವಿಲ್ಲ ಆದುದರಿಂದ ಈ ಖಾದಿ ಬೋರ್ಡಿನ ವಿಚಾರ ಸರಿಯಾಗಿಲ್ಲ ಎನ್ನುವುದನ್ನು ಹಿಂದೆಯೂ ಒಪ್ಪಿಕೊಂಡಿದ್ದೇನೆ, ಇವತ್ತೂ ಒಪ್ಪಿಕೊಂಡಿದ್ದೇನೆ. ಆಗಬಾರದ್ದೆಲ್ಲ ಆಗಿದೆ, ಇವತ್ತು ನಾವು ಒಂದು ಸೊಸೈಟಿ ಮಾಡಿಕೊಳ್ಳುತ್ತೇವೆ, ದಯವಿಟ್ಟು ನಮಗೆ ಅನುಕೂಲ ಮಾಡಿಕೊಡಿ ಎಂದು ಕೇಳುವುದು; ನಾಳೆಯೇ ಅದಕ್ಕೆ ತಥಾಸ್ತು ಎಂದು ಆಜ್ಞೆಕೊಡುವುದು ಮಾರನೆಯ ದಿವಸವೇ ಹತ್ತು ಸಾವಿರ, 20 ಸಾವಿರ ದುಡ್ಡು ಕೊಡಿ ಎಂದು ಕೇಳಿ ದುಡ್ಡು ತೆಗೆದುಕೊಳ್ಳುವುದು. ಆರು ತಿಂಗಳಾದ ಮೇಲೆ ಸೊಸೈಟಿಯೂ ಇಲ್ಲ, ಏನೂ ಇಲ್ಲ. ಬೋರ್ಡ್ ಮಾತ್ರ ಅಲ್ಲಿರುತ್ತದೆ. ಸ್ವಾಮಿ, ನಾನು ಈ ವಿಷಯದ ಬಗ್ಗೆ ಎಲ್ಲ ಹೇಳಿದ್ದೇನೆಂದು ತಿಳಿದುಕೊಂಡಿದ್ದೇನೆ.

ಪ್ರೈವೇಟ್ ಮೆಡಿಕಲ್ ಕಾಲೇಜು ವಿಚಾರದಲ್ಲಿ ಬಹಳ ಮಾತನಾಡಿದ್ದಾರೆ. ಇದು ಸ್ವಲ್ಪ ವಿಚಾರ ಮಾಡತಕ್ಕದ್ದು. ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಯಾರು ಪ್ರಾರಂಭ ಮಾಡಿದರೋ ಅವರ ವಿಚಾರದಲ್ಲಿ ನಾವು ವಿರೋಧವಾಗಿ ಹೇಳುವುದಕ್ಕೆ ಹೋಗಬಾರದು. ಯಾವ ಕಾಲದಲ್ಲಿ ಕಾಲೇಜುಗಳಿರಲಿಲ್ಲವೋ—ಇಂಜನಿಯರಿಂಗ್ ಕಾಲೇಜುಗಳೂ ಇರಲಿಲ್ಲ—ಆಗ ಕಾಲೇಜುಗಳನ್ನು ತೆರೆದು ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಅನೇಕ ಜನ ವೈದ್ಯರು, ಇಂಜಿನಿಯರುಗಳು ತಯಾರಾಗಿದ್ದಾರೆ. ಖಾಸಗಿ ಶಾಲೆಗಳವರು ದುಡ್ಡು ತೆಗೆದುಕೊಳ್ಳುವುದು ಸರಿಯಲ್ಲ ಎಂದು ಅನೇಕರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಕೆಲವರು ಟೀಕೆ ಮಾಡಿದಂತೆ ಅವರು ದುಡ್ಡು ತಿಂದಿದ್ದಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅವರು ನನಗೆ ಗೊತ್ತಿರುವ ಹಾಗೆ ಲೆಕ್ಕವನ್ನು ಇಟ್ಟಿದ್ದಾರೆ. ಕೆಲವು ಕಡೆ ಬಹಳ ದುಡ್ಡು ತೆಗೆದುಕೊಳ್ಳುತ್ತಾರೆ ಎನ್ನುವ ಪುಕಾರು ಇದೆ. ಕೆಲವರು ಮೂರು ಸಾವಿರ, ಕೆಲವರು ಐದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಅದರ ನಾಲ್ಕೈದರಷ್ಟು ಕೂಡ ತೆಗೆದುಕೊಳ್ಳುತ್ತಾರೆ ಎನ್ನುವ ಪುಕಾರು ಇದೆ. ಅದನ್ನು ವಿಚಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಮತ್ತೊಂದು ವಿಚಾರವನ್ನು ಇಲ್ಲಿ ಅರಿಕೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಸಹ ಆ ವಿಚಾರವನ್ನು ಆಲೋಚನೆ ಮಾಡುತ್ತಿದ್ದಾರೆ. ನಾಲ್ಕನೆಯ ಯೋಜನೆಯಲ್ಲಿ ಎರಡು ಮೆಡಿಕಲ್ ಕಾಲೇಜುಗಳನ್ನು ಮೈಸೂರಿನಲ್ಲಿ ಸರ್ಕಾರದವರು ತೆಗೆದುಕೊಳ್ಳಬೇಕು ಎಂದಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳೂ ಮಾತನಾಡುತ್ತಾರೆ. ನಾವು ಮಾತನಾಡುತ್ತೇವೆ. ನಮ್ಮ ಹತ್ತಿರ ಬೇಕಾದಷ್ಟು ದೂರುಗಳು ಬರುತ್ತಿವೆ, ವಿದ್ಯಾರ್ಥಿಗಳಿಗೆ ಈ ರೀತಿಯಾದ ತೊಂದರೆಯಾಗುತ್ತಿದೆ ಎಂದು. ಆದರೆ ಖಾಸಗಿ ಕಾಲೇಜುಗಳು ಇಲ್ಲದೆ ಹೋದರೂ ಕಷ್ಟವಾಗುತ್ತದೆ. ಅವರು ಮಾಡಿರತಕ್ಕ ಕೆಲಸವನ್ನು ನಾವು ಮೆಚ್ಚಬೇಕಾಗುತ್ತದೆ. ಅವರು ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳುವುದು ಸರಿಯಲ್ಲ. ನಾವು ಆ ಕಾಲೇಜುಗಳನ್ನು ವಹಿಸಿಕೊಳ್ಳಬೇಕಾದರೆ ಕಾನೂನು ಪ್ರಕಾರವಾಗಿ ಏನು ತೊಂದರೆಗಳಿವೆ ಎನ್ನುವುದನ್ನು ವಿಚಾರಮಾಡಬೇಕು. ಇದಕ್ಕೆ ಸರಿಯಾದ ಏರ್ಪಾಡುಮಾಡಿ ಸರ್ಕಾರ ಖಾಸಗಿ ಕಾಲೇಜುಗಳನ್ನು ವಹಿಸಿಕೊಳ್ಳುವುದು ಸೂಕ್ತ ಎನ್ನುವುದು ನನ್ನ ಸ್ವಂತ ಅಭಿಪ್ರಾಯ. ಸರ್ಕಾರ ಈ ವಿಚಾರದಲ್ಲಿ ತೀರ್ಮಾನ ಮಾಡಿಲ್ಲ. ಎರಡು ಮೆಡಿಕಲ್ ಕಾಲೇಜುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಒಂದು ಸ್ಥೂಲವಾದ ವಿಚಾರವಿದೆ. ಇದನ್ನು ಮೈಸೂರು ಸರ್ಕಾರವೇ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರದವರು ತೆಗೆದುಕೊಳ್ಳಬೇಕಾದ್ದು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮಾತ್ರ. ಅದನ್ನು ಸೆಂಟ್ರಲ್ ಯೂನಿವರ್ಸಿಟಿ ಮಾಡಬೇಕು ಎಂದು ಕೇಂದ್ರದವರು ಹೇಳಿದ್ದರು, ಹಾಗೆ ಒಪ್ಪಿಕೊಂಡಿದ್ದರು. ಆದರೆ ಇವತ್ತು ಏಕೋ ಹಿಂದು ಮುಂದು ನೋಡುತ್ತಿದ್ದಾರೆ. ಅದೊಂದನ್ನು ಬಿಟ್ಟರೆ ಉಳಿದುವನ್ನು ನಾವೇ ತೆಗೆದುಕೊಳ್ಳುತ್ತೇವೆ.

ಷೆಡ್ಯೂಲ್ ಕ್ಯಾಸ್ಟ್‌ನವರ ಮನೆಗಳ ವಿಚಾರವಾಗಿ ಮಾನ್ಯ ಸದಸ್ಯರಾದ ಜಯಪ್ರಕಾಶ ನಾರಾಯಣ್ ಅವರು ಮಾತನಾಡಿ ಏನೂ ಮಾಡಿಲ್ಲ ಎಂದು ಹೇಳಿದರು. ಬಹುಶಃ ಒಟ್ಟು ಎಲ್ಲ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಮೈಸೂರು ಸರ್ಕಾರ ಮತ್ತು ಮೈಸೂರು ಜನತೆ ಈ ವಿಚಾರದಲ್ಲಿ ನೀಡಿರತಕ್ಕ ಅಭಿಮಾನ ಇನ್ನು ಎಲ್ಲಿಯೂ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹರಿಜನರಿಗೆ ಒಂದು ಮನೆಗೆ 400 ರೂಪಾಯಿಗಳನ್ನು ಕೊಡಬೇಕೆಂದು ಆರ್ಡರಾಗಿತ್ತು. 400 ರೂಪಾಯಿ ಅವರಿಗೆ ಸರಿಯಾಗಿ ಸೇರುತ್ತಿದೆಯೇ ಎಂದು ಕೇಳಿದರೆ ಅವರಿಗೆ ಸೇರುತ್ತಿದೆ ಎಂದು ಹೇಳುವುದಕ್ಕೆ ನನಗೆ ಅವಮಾನವಾಗುತ್ತದೆ, ನನ್ನ ಸ್ವಂತ ಅಭಿಪ್ರಾಯದಲ್ಲಿ. ನಾನು ಒಮ್ಮೆ ತುರುವನೂರಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿಯೇ ನಮ್ಮ ರಾಜಕೀಯ ಪ್ರಾರಂಭವಾದದ್ದು, ಈಚಲು

(ಶ್ರೀ ಎಸ್. ನಿಜಲಿಂಗಪ್ಪ)

ಮರವನ್ನು ಕಡಿಯುವಂಥ ಪ್ರಯತ್ನ. ಅಲ್ಲಿಗೆ ಮೂರು ಜನ ಹರಿಜನರು ಚಿತ್ರದುರ್ಗದಿಂದ ದುಡ್ಡು ತೆಗೆದುಕೊಂಡು ಬಂದರು. ಎಷ್ಟು ದುಡ್ಡು ತೆಗೆದುಕೊಂಡು ಬಂದಿರಿ ಎಂದು ಕೇಳಿದರೆ ಅವರು ಏನೂ ಹೇಳಲಿಲ್ಲ. ಎಲ್ಲಿಗೆ ಹೋಗಿದ್ದೀರಿ ಎಂದು ಕೇಳಿದಾಗ ಸರ್ಕಾರ ಮನೆ ಕಟ್ಟಿಕೊಳ್ಳುವುದಕ್ಕೆ 400 ರೂಪಾಯಿ ಕೊಟ್ಟಿದ್ದರು, ಅದರಲ್ಲಿ ಕೆಲವು ಭಾಗ ಬರಬೇಕಾಗಿತ್ತು, ಅದನ್ನು ತೆಗೆದುಕೊಂಡು ಬಂದೆವು ಎಂದು ಹೇಳಿದರು. ಅವನ ಹತ್ತಿರ ಇದ್ದ ದುಡ್ಡನ್ನೆಲ್ಲ ತೆಗೆಸಿ ನೋಡಿದ್ದರಲ್ಲಿ ಒಬ್ಬನ ಹತ್ತಿರ 150 ರೂಪಾಯಿ, ಇನ್ನೊಬ್ಬನ ಹತ್ತಿರ 170 ರೂಪಾಯಿ ಮತ್ತೊಬ್ಬನ ಹತ್ತಿರ 175 ರೂಪಾಯಿ ಇತ್ತು. ಅವರು ತೆಗೆದುಕೊಂಡು ಬರುವುದಕ್ಕೆ ಹೋಗಿದ್ದದ್ದು 250 ರೂಪಾಯಿ ಬಾಕಿಯದು ಏನಾಯಿತು ಎಂದರೆ ಅವರು ಹೇಳಲಿಲ್ಲ. ಆದರೂ ಏನಾಗಿದೆ ಎಂದು ನನಗೆ ಗೊತ್ತಾಯಿತು. ಆ ಬಗ್ಗೆ ಒಂದು ಕಾಗದ ಬರೆದೆ. ಗುಮಾಸ್ತರಿಗೆ ಏನೋ ಶಿಕ್ಷೆ ಮಾಡಿದರು ಎಂದು ಕಾಣುತ್ತದೆ. ಇದನ್ನು ಇಲ್ಲಿ ಹೇಳತಕ್ಕ ಪ್ರಮೇಯವೇನೂ ಎಂದರೆ, ಹರಿಜನರಿಗೆ ದುಡ್ಡು ಸರಿಯಾಗಿ ಸಿಕ್ಕುತ್ತಿರಲಿಲ್ಲ ಎನ್ನುವುದಕ್ಕೆ. ಇದನ್ನೆಲ್ಲ ತಪ್ಪಿಸಲು ಒಂದು ಉಪಾಯ ಮಾಡಿದೆವು. ಸೊಸೈಟಿಗಳ ಮೂಲಕ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದೆವು. ಸೊಸೈಟಿಗೆ ಒಬ್ಬ ಗೃಹಸ್ಥ 10 ರೂಪಾಯಿಗಳನ್ನು ಕೊಟ್ಟರೆ ಸರ್ಕಾರದವರು 90 ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಟ್ಟು ನೂರು ರೂಪಾಯಿ ಭರ್ತಿಮಾಡಿ ಅವನಿಗೆ ಒಂದು ಷೇರು ಸಿಕ್ಕುವಂತೆ ಮಾಡುವುದು. ಒಂದು ಷೇರಿನ ಮೇಲೆ ಅದರ ಎಂಟರಷ್ಟು ಸಾಲ ಕೊಡತಕ್ಕದು ಸರ್ವೇಸಾಧಾರಣ. ಆದರೆ ನಾವು ಒಂದು ಷೇರಿನ ಮೇಲೆ 30 ರಷ್ಟು ಕೊಡಬೇಕೆಂದು ಮೂರು ಸಾವಿರ ರೂಪಾಯಿ ಒಬ್ಬ ಗೃಹಸ್ಥನಿಗೆ ಕೊಡಬೇಕೆಂದು ಮಾಡಿದೆವು. ಈ ಪ್ರಕಾರವಾಗಿ ಅನೇಕ ಸೊಸೈಟಿಗಳು ನಡೆಯುತ್ತಿವೆ. ತೀವ್ರಗತಿಯಿಂದ ನಡೆಯುತ್ತಿದೆಯೋ ಇಲ್ಲವೋ ಎನ್ನುವ ಮಾತಿನಲ್ಲಿ ಸ್ವಲ್ಪ ಅಸಮಾಧಾನಕ್ಕೆ ಕಾರಣವಾಗಬಹುದು. ಹಿಂದೆ 400 ರೂಪಾಯಿಗಳನ್ನು ಕೊಡುತ್ತಿದ್ದಾಗ ಅದರಿಂದ ಮನೆ ಆಗುವುದಿಲ್ಲ ಎಂದು ಅದನ್ನು 700 ರೂಪಾಯಿಗಳಿಗೆ ಏರಿಸಿದರೆ ಸಣ್ಣ ಗುಡಿಸಲು ಆದೀತು ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದ್ದು 700 ರೂಪಾಯಿ ಕೊಡಬೇಕೆ ಬೇಡವೇ ಎನ್ನುವ ವಿಚಾರದಲ್ಲಿ ಯೋಚನೆ ಮಾಡಿದೆವು.

ಸೊಸೈಟಿಗಳ ಮೂಲಕ ಅವರು ಮನೆಗಳನ್ನು ಕಟ್ಟಿಕೊಳ್ಳಬಹುದು. ಮನೆ ಕಟ್ಟುವುದಕ್ಕೆ ಇನ್ನೂ ಜಾಸ್ತಿ ಹಣ ಅವರಿಗೆ ಕೊಡಬಹುದು. ಆದರೆ 400 ರೂಪಾಯಿ 700 ರೂಪಾಯಿಗಳಿಂದ ಉಪಯೋಗವಾಗುತ್ತದೆಯೋ ಇಲ್ಲವೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇಷ್ಟು ಹಣದಿಂದ ಒಳ್ಳೆಯ ಮನೆಯಾಗುತ್ತದೆಯೇ ? ಇದರಿಂದ ಯಾವ ಮನೆಯಾದೀತು ಎಂದು ನನಗೆ ಅನಿಸುತ್ತದೆ. ಆದುದರಿಂದ ಈ ಮನೆ ಕಟ್ಟುವ ಕೆಲಸ ಸೊಸೈಟಿಗಳ ಮೂಲಕ ಮಾಡುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸೊಸೈಟಿಗಳಿಂದ ತೆಗೆದುಕೊಳ್ಳುವ ಸಾಲ ತೀರಿಸುದಕ್ಕೆ ಅವರಿಗೆ ಶಕ್ತಿ ಎಲ್ಲಿ.

ಶ್ರೀ ಎಸ್. ನಿಜಲಿಂಗಪ್ಪ.—ಇಷ್ಟೇ ಹೇಳುತ್ತೇನೆ. ಇದಕ್ಕಾಗಿ ಬಹಳ ಜನ ಬರುತ್ತಿದ್ದಾರೆ. ಸೊಸೈಟಿ ರಿಜಿಸ್ಟರ್ ಮಾಡಿಕೊಂಡು ಹಣ ಕೊಡಿ ಎಂದು ಜನ ಮುಂದೆ ಬರುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಸೊಸೈಟಿಗಳ ಮೂಲಕ ಮನೆ ಕಟ್ಟಿಸುವ ಯೋಜನೆಯನ್ನು ಜಾರಿಗೆ ತಂದ ಮೇಲೆ ಮೂರುವರೆ ಕೋಟಿ ರೂಪಾಯಿ ಎಲ್. ಐ. ಸಿ. ಯಿಂದ ಪಡೆದ ಹಣದಲ್ಲಿ ಇದುವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ? ಈ ಹಣ ಅಪೆಕ್ಸ್ ಬ್ಯಾಂಕಿನಲ್ಲಿ ಕೊಳೆಯುತ್ತಾ ಬಿದ್ದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಹಣಕ್ಕೆ ಶೇಕಡ 3 ರಷ್ಟು ಬಡ್ಡಿ ಕೊಡಲಾಗುವುದು. ಸೊಸೈಟಿ ರಚನೆ ಮಾಡಿಕೊಂಡು ಅನೇಕ ಜನರು ಮುಂದೆ ಬರುತ್ತಿದ್ದಾರೆ. ಸೊಸೈಟಿ ರಿಜಿಸ್ಟರ್ ಮಾಡಿ ಎಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಹೇಳುವುದು ಇಷ್ಟೇ. ನಾವೆಲ್ಲರೂ ಒಂದು ಕೆಲಸ ಮಾಡೋಣ. ತಾವೆಲ್ಲರೂ ಸುತ್ತು ಮುತ್ತು ಹೋದಾಗ ಸೊಸೈಟಿಗಳನ್ನು ರಿಜಿಸ್ಟರ್ ಮಾಡಿಕೊಂಡು ಆ ವಿವರ ನನಗೆ ತಂದು ಕೊಟ್ಟರೆ ಕೂಡಲೇ ಈ ಮೂರುವರೆ ಕೋಟಿ ರೂಪಾಯಿ ಹಣ ಅವರಿಗೆ ಸ್ಯಾಂಕ್ಷನ್ ಮಾಡುವುದಕ್ಕೆ ಸಾಧ್ಯವಿದೆ. ಯಾವ ಯಾವ ಸೊಸೈಟಿ ರಿಜಿಸ್ಟರ್ ಆಗತಕ್ಕಂಥಾದ್ದು ಇದೆ. ಸೊಸೈಟಿ ರಿಜಿಸ್ಟರ್ ಆಗಬೇಕಾದುದು ಪೆಂಡಿಂಗ್ ಇದೆ ಎಂಬುದನ್ನು ದಯವಿಟ್ಟು ನನಗೆ ವಿವರ ಕೊಟ್ಟರೆ ಅದನ್ನೂ ಕೂಡ ಮಾಡಿಸಿ ಕೊಡುತ್ತೇನೆ. ಒಮ್ಮೆಲೆ ಎಲ್ಲರಿಗೂ ಮನೆಗಳನ್ನು ಕಟ್ಟಿಸಿ ಕೊಡುವುದು ಸಾಧ್ಯವಿಲ್ಲ. ಅದಕ್ಕೆ 50 ವರ್ಷ ಗಳಾದರೂ ಬೇಕಾಗಬಹುದು.

ಒಬ್ಬ ಮಾನ್ಯ ಸದಸ್ಯರು.—ಷೆಡ್ಯೂಲ್ ಕ್ಯಾಸ್ಟ್ ಜನರಿಂದ ಜಮೀನು ಅಡವು ಮಾಡಿ ಕೊಡಿ ಎಂದು ಕೇಳುತ್ತಿದಾರೆ. ಅವರು ಜಮೀನು ಅಡವು ಕೊಡುವುದು ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನಿಜವೆಂದು ನನಗೆ ಅನಿಸುವುದಿಲ್ಲ. ಆಮೇಲೆ ಇನ್ನೊಂದು ವಿಷಯ ಏನೆಂದರೆ, ಜಮೀನು ಸಾಕಷ್ಟು ಕೊಡುತ್ತಿಲ್ಲ ಎಂದು ಒಂದು ಪುಕಾರು ಇದೆ. ನಾನು ಅನೇಕ ಕಡೆ ನೋಡಿದ್ದೇನೆ. ಸರಕಾರ ಜಮೀನು ಕೊಟ್ಟಮೇಲೆ ಅವರ ಕೈಯಲ್ಲಿ ಮೂರು ನಾಲ್ಕು ವರ್ಷ ಉಳಿಯುತ್ತದೋ ಇಲ್ಲವೋ ? ಅಂಥವರಿಗೆ ಕೊಟ್ಟ ಜಮೀನು ಏನಾದರೂ ಮಾಡಿ ಪುನಃ ಪುಢಾರಿಗಳ ಕೈ ಸೇರುತ್ತದೆ. ಇದು ದುರ್ದೈವದ ಮಾತು.

ಆಮೇಲೆ ಜನತಾ ಬಜಾರ್ ವಿಚಾರ ಶ್ರೀ ವಾಟಾಳ್ ನಾಗರಾಜರು ಹೇಳಿದರು. ಅವರು ಚಳುವಳಿ ಮಾಡುವುದಕ್ಕೆ ಏನಾದರೂ ಒಂದು ಕಾರಣ ಹುಡುಕುತ್ತಾ ಇರುತ್ತಾರೆ. ಅವರ ಜೀವನದ ರೀತಿಯೇ ಹಾಗೆ. ಇರಲಿ. ಜನತಾ ಬಜಾರ್ ಸಮರ್ಪಕವಾಗಿ ನಡೆಯುತ್ತಿದೆ. ಅದು ಪ್ರಾರಂಭವಾಗಿ ನಾಲ್ಕು ತಿಂಗಳಾಯಿತು. ನಾಲ್ಕು ಲಕ್ಷ ರೂಪಾಯಿ ವ್ಯಾಪಾರವಾಗಿದೆ. 40 ಸಾವಿರ ರೂಪಾಯಿ ಲಾಭ ಬಂದಿರುವುದರಲ್ಲಿ 38 ಸಾವಿರ ಸಿಬ್ಬಂದಿಗಾಗಿ ಖರ್ಚು ಮಾಡಿ ಎರಡು ಸಾವಿರ ರೂಪಾಯಿ ಲಾಭ ಉಳಿಯುತ್ತಿದೆ. ಇದರಲ್ಲಿ ಹಣಕ್ಕೆ ಐದು ಸಾವಿರ ರೂಪಾಯಿ ಬಡ್ಡಿ ಕೊಡುತ್ತಿದ್ದೇವೆ. ಅಲ್ಲದೆ ಬಾಡಿಗೆ ಕೊಡುತ್ತೇವೆ ಇನ್ಶೂರೆನ್ಸ್ ಕೊಡುತ್ತೇವೆ ಎಲ್ಲಾ ಖರ್ಚು 38 ಸಾವಿರ ಕಳೆದು ತಿಂಗಳಿಗೆ ಎರಡು ಸಾವಿರ ಉಳಿಯುತ್ತಿದೆ. ಇದನ್ನು ನೋಡದೆ ತಿಳಿದುಕೊಳ್ಳದೇ ಏನೋ ಹೇಳುತ್ತಾರೆ. ಚಳುವಳಿ ಮಾಡುವುದಕ್ಕೆ ಅವರಿಗೆ ಏನಾದರೂ ಒಂದು ಕಾರಣ ಬೇಕು ಎಂದು ಅನಿಸುತ್ತದೆ. ಈಗಾಗಲೇ ಅವರಿಗೆ ತಾಳ್ಮೆ ಬರಬೇಕಾಗಿತ್ತು. ಇನ್ನೊಂದು ವಿಚಾರ ಹೇಳಿದರು. ಸಾಕಷ್ಟು ಸಾಮಾನು ಅಲ್ಲಿ ಮಾರಾಟವಾಗುತ್ತಿಲ್ಲ ಎಂದು ಹೇಳಿದರು. ಅಗತ್ಯವಾಗಿ ಬೇಕಾಗತಕ್ಕಂಥ ಸಾಮಾನುಗಳು ಅಲ್ಲಿ ಮಾರಾಟವಾಗುತ್ತಿದೆ. ಅವಶ್ಯವಾಗಿ ಬೇಕಾಗಿರತಕ್ಕಂಥ ಎಣ್ಣೆ ಬೆಣ್ಣೆ ತರಕಾರಿ ಕೂಡ ಮಾರುತ್ತಿದ್ದಾರೆ. ಅವರು ಹೇಳುವ ಹಾಗೆ ಅಕ್ಕಿ, ಜೋಳ, ರಾಗಿ ಮಾರಾಟ ಮಾಡಬೇಕಾಗಿತ್ತು ಎಂದು ಕಾಣುತ್ತದೆ. ಆದರೆ ಅಕ್ಕಿ, ಜೋಳ, ರಾಗಿ ಮಾರಾಟ ಮಾಡುವುದಕ್ಕೆ ಅಲ್ಲಲ್ಲಿ ಫೇರ್ ಪ್ರೈಸ್ ಶಾಪ್ಸ್ ಸಾಕಷ್ಟು ಇವೆ. ಈ ಪದಾರ್ಥಗಳನ್ನೂ ಕೂಡ ಅಲ್ಲಿ ಮಾರಾಟ ಮಾಡಬೇಕು. ಎಂದು ಸೂಚಿಸುವುದಾದರೆ ಅದನ್ನು ಯೋಚನೆ ಮಾಡೋಣ; ಅದಕ್ಕೆ ನಾವೇನೂ ವಿರೋಧವಾಗಿಲ್ಲ. ಫೇರ್ ಪ್ರೈಸ್ ಶಾಪ್ಸ್ ಬೇಕಾದಷ್ಟು ಇರುವಾಗ ಜನತಾ ಬಜಾರದಲ್ಲಿ ಇವುಗಳನ್ನು ಮಾರಾಟ ಮಾಡುವುದು ಅನಾವಶ್ಯಕ ಎಂದು ಅನಿಸುತ್ತದೆ. ಜನ ಇದೂ ಸಹ ಬೇಕು ಎಂದು ಹೇಳಿದರೆ ಅದಕ್ಕೆ ನಾವು ವಿರೋಧವಿಲ್ಲ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಇವತ್ತು ಕಷ್ಟ ಪಡಬೇಕಾದ ಕಾಲ ಬಂದಿದೆ. ಇಂದು ನಾವು ಏನು ಮಾಡುತ್ತೇವೆ ಎಂಬುದನ್ನು ಮುಂದೆ ಜನ ನೋಡುತ್ತಾರೆ.

(ಶ್ರೀ ಎಸ್. ನಿಜಲಿಂಗಪ್ಪ)

ನೀರಾವರಿ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇವುಗಳನ್ನು ಯಶಸ್ವಿಯಾಗಿ ಮಾಡಲು ಎಲ್ಲರೂ ಪ್ರಯತ್ನ ಮಾಡೋಣ. ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡೋಣ. ನಾವು ವಿರೋಧ ಪಕ್ಷದವರ ಸಹಕಾರ ತೆಗೆದುಕೊಳ್ಳುವುದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ ಹೊರಗಡೆ ಏನಾದರೂ ಇರಲಿ. ಅದಕ್ಕೆ ಬೇರೆ ಕಾರಣ ಇರಬಹುದು. ಆದರೆ ಈ ಮನೆಯಲ್ಲಿ ಯಾರೇ ಆಗಲಿ ಏನೇ ಆಗಲಿ ಸಲಹೆ ಕೊಟ್ಟರೆ ಅದನ್ನು ಅಭಿಮಾನದಿಂದ ನಮ್ರತೆಯಿಂದ ತೆಗೆದು ಕೊಂಡು ಕೆಲಸ ಮಾಡೋಣ. ಈ ರೀತಿ ವಿನಂತಿ ಮಾಡಿಕೊಂಡು ತಮ್ಮ ಅಪ್ಪಣೆ ತೆಗೆದು ಕೊಳ್ಳುತ್ತೇನೆ.

ಮತ್ತೊಂದು ಮಾತು ಹೇಳಿದ್ದಾರೆ. ಬಹಳ ಗಲಾಟೆ ಮಾಡಿದರು. ಮಂತ್ರಿಮಂಡಲದಲ್ಲಿ ಮಂತ್ರಿಗಳು ಜಾಸ್ತಿ ಇದ್ದಾರೆ ಎಂದು. ಆದರೆ ಇದಕ್ಕೂ ಜಾಸ್ತಿ ಮಾಡಬೇಕಾದ ಸಂದರ್ಭ ಬಂದರೆ ಅಗತ್ಯವಾದರೆ ಜಾಸ್ತಿ ಮಾಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಗತಿ ಏನು ? ನಿಮ್ಮ ತತ್ವ ಎಲ್ಲಿ ಹೋಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಗತಿ ಏನೂ ಆಗುವುದಿಲ್ಲ. ಅನೇಕ ರಾಜ್ಯಗಳಲ್ಲಿ ಕೆಲಸ ನೋಡಿಕೊಂಡು ಜಾಸ್ತಿ ಮಾಡುತ್ತಾ ಇದ್ದಾರೆ. ಬಿಹಾರ್‌ನಲ್ಲಿ ಮಂತ್ರಿಗಳನ್ನು ಜಾಸ್ತಿ ಮಾಡಿದ್ದಾರೆ. ಕೆಲಸ ನಡೆಸಿಕೊಂಡು ಹೋಗುವುದಕ್ಕೆ ಅವಶ್ಯಕ ಎಂದು ಕಂಡು ಬಂದರೆ ಸೂಕ್ತವಾದುದನ್ನು ಮಾಡಬೇಕಾಗುತ್ತದೆ. ಅನವಶ್ಯಕವಾಗಿ ಹೆಚ್ಚು ದುಡ್ಡು ಖರ್ಚು ಮಾಡುವುದಿಲ್ಲ. ಐವತ್ತು ಸಾವಿರ ರೂಪಾಯಿ ಹೆಚ್ಚು ಖರ್ಚು ಮಾಡುವುದರಿಂದ ನಾವು ಹಾಳಾಗಿ ಹೋಗುತ್ತೇವೆಂದು ಹೇಳಿದರೆ ನಾವು ಇಲ್ಲಿ ಇರುವುದಕ್ಕೂ ಲಾಯಖು ಅಲ್ಲ.

Mr. SPEAKER.—If the Food Minister is ready with the reply, he may reply.

Sri B. D. JATTI.—Sir, one of the Hon'ble Members wanted to know the basis for the levy orders. The four orders are under Essential Commodities Act and not under the Defence of India Rules.

Hon'ble Member Sri M. Y. Ghorpade wanted to know the Central allotment of foodgrains to Mysore during the year 1966. The total quantity received for the year 1966 was, wheat-24,035 tons, rice 3,05,363 tons, milo-22,577 tons. The Hon'ble Member wanted to know the estimate of foodgrains during the current year. During the current year it is estimated that the following quantities would be procured:

Paddy	1,50,000	tons
Jowar	80,000	,,
Bajra	40,000	,,
Ragi	20,000	,,

This year's demand which has to be made to the Government of India is, Rice 65,000 tons, wheat 2,40,000 tons, mile 1,20,000 tons,

12-00 NOON

ಶ್ರೀ ಎಸ್. ಶಿವಪ್ಪ.—ಮುಖ್ಯ ಮಂತ್ರಿಗಳಲ್ಲಿ ಒಂದು ವಿವರಣೆ ಕೇಳಬೇಕಾಗಿದೆ. ಏಕ ಸದಸ್ಯ ಆಯೋಗವೇನು ರಚಿತವಾಗಿದೆ ಆ ಸಂಬಂಧದಲ್ಲಿ ಅವರ ನಿಲುವೇನು ? ಆ ಆಯೋಗದವರು ಎಲ್ಲಾ ಕಡೆ ಸಂಚಾರ ಮಾಡುತ್ತಿದ್ದಾರೆ. ಒಂದು ಸಂದರ್ಭದಲ್ಲಿ ಮಹಾರಾಷ್ಟ್ರ ಮತ್ತು ಮೈಸೂರು

ಗಡಿ ವಿಚಾರ ಮತ್ತೆ ರೀ ಓಪನ್ ಮಾಡಬಾರದೆಂದೂ ಆದಕ್ಕೆ ವಿರೋಧವಿದೆಯೆಂದೂ ಅವರು ಹೇಳಿದರು.

ಶ್ರೀ ಎಸ್. ನಿಜಲಿಂಗಪ್ಪ.—ಆ ಅಭಿಪ್ರಾಯವಿದೆ. ಆದರೆ ಕೇಂದ್ರ ಸರಕಾರ ಒಂದು ತೀರ್ಮಾನ ಮಾಡಿದೆ, ನಾವು ಸಣ್ಣಪುಟ್ಟ ಹೊಂದಾಣಿಕೆಗೆ ಸಿದ್ಧವಾಗಿರುವುದಾಗಿ ಹೇಳಿದ್ದೇವೆ. ಆಯೋಗಕ್ಕೆ ಕೊಡಲು ಮೆಮೊರ್ಯಾಂಡಂ ತಯಾರಾಗುತ್ತಿದೆ. ಬಹುಶಃ ಅದರ ಕಾಪಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇವೆ. ಅದು 3-4 ದಿವಸಗಳಲ್ಲಿ ತಯಾರಾಗಬಹುದು.

Mr. SPEAKER.—It may be circulated to the members and not kept on the Table. If members want to give further suggestions they can mention. I am mentioning this because, let it not become a public document until something comes from the other side.

ಶ್ರೀ ಎಲ್. ಶ್ರೀಕಂಠಯ್ಯ.—ಆ ಮನವಿಯಲ್ಲಿ ಕನ್ನಡ ಪ್ರದೇಶಗಳಾದ ಕಾಸರಗೋಡು ಮತ್ತು ನೀಲಗಿರಿ ಭಾಗಗಳನ್ನೂ ನಮಗೆ ಕೊಡಬೇಕೆಂದು ಸೂಚಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಇದೆಲ್ಲಾ ನಿರ್ಣಯ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರಿಗೆ ಉಚಿತವಾಗಿ ನೀರನ್ನೊದಗಿಸುವುದು ಮನೆ ಕಂದಾಯದ ವಸೂಲಿಯಲ್ಲಿ ಕಾರ್ಪೊರೇಷನ್ನಿಂದ ತೊಂದರೆಯಾಗುತ್ತಿರುವುದು ಮುಂತಾದ ವಿಷಯಗಳಲ್ಲಿ ಜವಾಬು ಹೇಳಲಿಲ್ಲ. ಮನೆಗಳಲ್ಲಿರುವ ಸಾಮಾನುಗಳನ್ನು ಹೊರಗೆ ಹಾಕಿ ಹರಾಜು ಮಾಡುತ್ತಿದ್ದಾರೆ, ನಿನ್ನೆ ಇದರ ಬಗ್ಗೆ ಮನವಿ ಸಲ್ಲಿಸಿದೆ. ಲಕ್ಷಾಂತರ ಮಂದಿ ಕನ್ನಡಿಗರು ನಿರುದ್ಯೋಗಿಗಳಾಗಿದ್ದಾರೆ, ಅವರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ? ಆಯೋಗವೇನು ರಚಿತ ವಾಗಿದೆ ಅದಕ್ಕೆ ತಾಳವಾಡಿ ಮುಂತಾದ ಕನ್ನಡ ಪ್ರದೇಶಗಳನ್ನು ಕರ್ಣಾಟಕಕ್ಕೆ ಸೇರಿಸುವ ವಿಚಾರದಲ್ಲಿ ಹೇಗೆ ಮನವಿ ಮಾಡುತ್ತೀರಿ? ಮೈಸೂರು ಮಹಾರಾಷ್ಟ್ರದ ವಿಚಾರ ಮಾತ್ರ ಆಯೋಗಕ್ಕೆ ಸಂಬಂಧಪಟ್ಟಿದೆ, ಕಾಸರಗೋಡು, ಮದ್ರಾಸಿನಿಂದ ಬರಬೇಕಾದ ಹೊಸೂರು, ತಾಳವಾಡಿ ವಿಚಾರ ಸಂಬಂಧಪಟ್ಟಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರಿನ ನೀರು ಸರಬರಾಜಿನ ಬಗ್ಗೆ ಎರಡು ವರ್ಷ ಗಳಿಂದ ಹೋರಾಡುತ್ತಿದ್ದರೂ ಆ ವಿಚಾರವನ್ನು ತೀರ್ಮಾನ ಮಾಡದಿರಲು ಕಾರಣವೇನು?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರದಲ್ಲಿ ಸಾಕಾದಷ್ಟು ತೀವ್ರತೆ ಸರಕಾರಕ್ಕಿದೆ. ಹೊರಗಡೆ ಯಿಂದ ಸಾಲ ಕೇಳಿದ್ದೇವೆ, ಬಹುಶಃ ಅದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಬೇಕಾದ ಪೈಪುಗಳಿಗೆ ಟೆಂಡರು ಕರೆಯುವುದು, ಕಡಮೆ ಖರ್ಚಿನಲ್ಲಿ ಕೆಲಸ ಮಾಡುವುದು ಮುಂತಾದ್ದನ್ನು ಯೋಚನೆ ಮಾಡುತ್ತಿದ್ದಾರೆ. ಕೆಲಸ ಪ್ರಾರಂಭವಾಗಿದೆ, ಅಕ್ವಿಜಿಷನ್ ಕೆಲಸ ನಡೆಯುತ್ತಿದೆ, ಕಾವೇರಿಯಿಂದ ನೀರನ್ನು ತರುವುದು ಅವಶ್ಯಕ, ಈ ವಿಚಾರದಲ್ಲಿ ಸದಸ್ಯರಿಗಿರುವಂತೆ ನನಗೂ ತೀವ್ರತೆಯಿದೆ. ಬೆಂಗಳೂರು ನಾಗರೀಕರು ಬೇಡವೆಂದರು ನಾನೇ ಒತ್ತಾಯ ಮಾಡಿ ಇದಕ್ಕೆ ಕೈ ಹಾಕಿದ್ದೇನೆ. ಇದಕ್ಕಾಗಿ 27 ಕೋಟಿ ರೂಪಾಯಿಗಳ ಅಂದಾಜಾಗಿದ್ದುದು ಈಗ 34 ಕೋಟಿ ರೂಪಾಯಿಗಳಿಗೇರಿದೆ. ಹೊರಗಡೆಯಿಂದ ಸಾಲ ಸಿಕ್ಕುವುದನ್ನು ನೋಡಿ ಕೆಲಸ ಮಾಡಬೇಕಾಗಿದೆ.

ಆಮೇಲೆ ಕನ್ನಡಿಗರ ವಿಚಾರ ಹೇಳಿದರು. ಮಹಾರಾಷ್ಟ್ರ ಮತ್ತು ಕೇರಳ ಮತ್ತು ಮೈಸೂರುಗಳ ಗಡಿಗಳಿಗೆ ಸಂಬಂಧಿಸಿದಂತೆ ಆಯೋಗ ರಚಿತವಾಗಿದೆ, ಹೊಸೂರು ಮತ್ತು ತಾಳವಾಡಿ ಫಿರ್ಕಾಗಳು ಮದ್ರಾಸಿಗೆ ಸಂಬಂಧಪಟ್ಟಿವೆ, ಅದು ಈಗ ರಚಿತವಾಗಿರುವ ಆಯೋಗಕ್ಕೆ ಸಂಬಂಧಿಸಿಲ್ಲ.

ಬೆಂಗಳೂರಿನಲ್ಲಿ ಕಂದಾಯ ವಸೂಲಿ ಮಾಡುವ ವಿಚಾರ ಪ್ರಸ್ತಾಪ ಮಾಡಿದರು. ಈಗ ಅರ್ಧ ತೆಗೆದುಕೊಂಡು ಮುಂದಿನ ಸಲ ಇನ್ನರ್ಧ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ನಿನ್ನೆ ತಿಳಿಸಿರುವ ಈ ವಿಚಾರವನ್ನು ಮತ್ತೇಕೆ ಇಂದು ಕೇಳಬೇಕು? ವಿಚಾರ ಮಾಡೋಣ.

Sri H. SIDDAVEERAPPA.—I want clarification on one or two points. Yesterday I asked for explanation from the Minister for Public Works with regard to the arbitration clause and the appointment of private contractors. Was it introduced by Sri H. M. Channabasappa when he became the P. W. D. Minister or was it introduced earlier in point of of time when Sri H. M. Channabasappa was no longer in the picture as a number of the treasury bench. The other point is, when the Leader of the House was elected by virtue of his party enjoying Mumerical strength, he made, if I remember correctly, two or three statements with regard to the strength of his Cabinet. We are not concerned with the composition.

Now, a suggestion is thrown that he i likely to enlarge the Cabinet. It has also appeared i t ie Press that in so many districts his party men are discontented and that three or four districts have not been represented in the Cabinet at all. For instance, Bellary, Shimoga, Raichur and Belgaum. If the Cabinet is to be enlarged with a view to satisfy his party members, that is a different matter ; but if it is with a view to have a proper work-load, my submission is that the strength that he is already having is more than adequate. What is more, we should take into consideration the Cabinets in Madras and Kerala who are our neighbours. We know what is our population and what is their population. We feel that this will be an additional burden, almost amounting to indirect taxation on the public. Therefore, I would request the Hon'ble the Leader of the House to ponder over this question. There will be utter discontent in the country if the size of the Cabinet is further enlarged.

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀಮಾನ್ ಸಿದ್ದವೀರಪ್ಪನವರು ಮಂತ್ರಿಮಂಡಲ ಜಾಸ್ತಿ ಮಾಡುತ್ತಾರೇನೋ ಅನ್ನತಕ್ಕ ವಿಚಾರ ಹೇಳಿದರು ; ಅವಶ್ಯಕತೆ ಕಂಡಾಗ ಮಾಡುವುದಕ್ಕೆ ಲೀಡರ್‌ಗೆ ಅಧಿಕಾರ ಇದೆ, ಮಾಡಬಹುದು. ಆದರೆ ಈ ಭಾಗದಲ್ಲಿ ತೃಪ್ತಿ ಇಲ್ಲ ಎನ್ನುವ ಮಾತು ನನಗೆ ಗೊತ್ತಿದ್ದಕ್ಕಿಂತ ಅವರಿಗೆ ಹೆಚ್ಚಾಗಿ ಗೊತ್ತಿರುವ ಹಾಗೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಪೇಪರ್‌ನಲ್ಲಿ ಬಂದಿದೆ.

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಗೊತ್ತಿಲ್ಲ, ಅಂತೂ ಅವರಿಗೇ ಚೆನ್ನಾಗಿ ಗೊತ್ತಿರುವ ಹಾಗೆ ಕಾಣುತ್ತದೆ. ಅಂತೂ ಅಷ್ಟು ಕುತೂಹಲದಿಂದ ಓದುತ್ತಾರಲ್ಲಾ ಅದಕ್ಕೆ ಬಹಳ ಸಂತೋಷ. ನಾನು ಸಂಖ್ಯಾ ಬಲದ ಮೇಲೆ ಮಂತ್ರಿಮಂಡಲ ಮಾಡುವುದಾದರೆ ಯು.ಪಿ.ನಲ್ಲಿ ಬಹುಶಃ 30 ಜನ ಮಾಡಿದರು, ಯು.ಪಿ.ಗೂ ಕೇರಳಕ್ಕೂ ಇರತಕ್ಕ ವ್ಯತ್ಯಾಸ ಆರನೇ ಒಂದೂ ಕೂಡ ಇಲ್ಲ. ಅಂದಮೇಲೆ 4 ಜನ ಮಾಡಬೇಕಾಯಿತು. ಅದು ಹಾಗಲ್ಲ. ಡಿಪಾರ್ಟ್‌ಮೆಂಟ್ಸ್ ಇರುತ್ತದೆ. ಕೇರಳ ಆಯಿತು, ಯು. ಪಿ. ಆಯಿತು, ಅಸ್ಸಾಂ ಆಯಿತು ಅಥವಾ ಇನ್ನಾವುದೋ ಸಣ್ಣ ಸಂಸ್ಥಾನ ಆಯಿತು. ಇರತಕ್ಕ ಖಾತೆಗಳು ಇಷ್ಟೇ ಇರುತ್ತವೆ. ಖಾತೆಗಳು ಇಷ್ಟೇ ಇರುತ್ತವೆ, ಕೆಲಸ ಕಡಿಮೆ ಇರಬಹುದು ಆದ್ದರಿಂದ ಒಂದೊಂದು ಖಾತೆಗೆ ಒಬ್ಬೊಬ್ಬ ಅಂತ ಮಾಡಬೇಕಾಗಿ ಬರುತ್ತದೆ. ಅದು ಯಾರು ಸರ್ಕಾರ ನಡೆಸತಕ್ಕ ಪಾರ್ಟಿ ಮಾಡಿಕೊಂಡಿದ್ದಾರೋ ಅವನಿಗೆ ಅನ್ವಯಿಸತಕ್ಕದ್ದೇ ಹೊರತು ಇಲ್ಲಿ ಸಮಾಧಾನ ಮಾಡುವ ಉದ್ದೇಶ ಇಲ್ಲ. ಅವಶ್ಯಕತೆ ಕಂಡುಬಂದರೆ ಜಾಸ್ತಿ ಮಾಡಬಹುದು ಎಂದು ಹೇಳಿದ್ದೇನೆ. ಅಷ್ಟೇ ಹೊರತು

ಸಮಾಧಾನ ಮಾಡಬೇಕಾಗಿಲ್ಲ. ಮತ್ತೊಂದು ಪ್ರಶ್ನೆ ಕೇಳಿದರು ಆರ್ಬಿಟ್ರೇಷನ್ ಕ್ಲಾಸ್ ವಿಷಯ ಅದಕ್ಕೆ ನಾನು ಅದನ್ನು ಕೇಳಿದ್ದೇನೆ, ಹೇಳುತ್ತೇನೆ ಎಂದು ಆಗಲೇ ಹೇಳಿದ್ದೇನೆ.

Sri C. K. RAJAIAH SHETTY—Sir, you were pleased to say that we are goingto have 4 more sugar factories in the co-operative sector. Is it not a factthat every sugar factory would require 8,000 to 10,000 acres of irrigable land and will they not to that extent come in the way of food production ?

ಶ್ರೀ ಎಸ್. ನಿಜಲಿಂಗಪ್ಪ.—ಏನೂ ಆಗುವುದಿಲ್ಲ. ಬಹುಶಃ ಬೆಲ್ಲ ತಿನ್ನುವ ಕಾಲವನ್ನು ಶೆಟ್ಟರು ಜ್ಞಾಪಕ ಮಾಡಿಕೊಳ್ಳುತ್ತಾ ಇದ್ದಾರೋ ಏನೋ! ಅವರು 8-10 ಸಾವಿರ ಎಕರೆ ಅಂತ ಅನ್ನುತ್ತಾರೆ ಅದು ತಪ್ಪು. ನಾವು ಎರಡು ಲಕ್ಷ ಟನ್ ಸಕ್ಕರೆ ಕಾರ್ಖಾನೆ ಮಾಡಿದರೆ ಅದಕ್ಕೆ ಬಹುಶಃ ಸುಮಾರು ಮೂರು ಸಾವಿರ ಎಕರೆ ಆಗುತ್ತದೆ. ಸಕ್ಕರೆಯೂ ಸಹ ಬಹಳ ಮುಖ್ಯವಾದ ಆಹಾರ, ಯಾರ ಮನೆಗೆ ಹೋದರೂ ಸಕ್ಕರೆ ಬೇಕು, ಪೂರ್ವ ಕಾಲದಲ್ಲಿ ಸಿಕ್ಕುತ್ತಾ ಇರಲಿಲ್ಲ, ಈಗ ಜನಗಳು ಅದನ್ನು ಹೆಚ್ಚಾಗಿ ಉಪಯೋಗ ಮಾಡುತ್ತಾ ಇದ್ದಾರೆ, ಅದೂ ಒಂದು ಆಹಾರವೇ. ಮಾನ್ಯ ಸದಸ್ಯರಿಗೆ ಒಂದು ಅಷ್ಯೂರೆನ್ಸ್ ಕೊಡುತ್ತೇನೆ, ಯಾವ ದೃಷ್ಟಿಯಿಂದಲೂ ಕೂಡ ತೊಂದರೆಯಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿದ್ಯುಚ್ಛಕ್ತಿ ನಾವು ಹೆಚ್ಚಾಗಿ ಉತ್ಪಾದನೆ ಮಾಡುತ್ತಾ ಇದ್ದೇವೆಯಲ್ಲಾ ಅದಕ್ಕೆ ತಕ್ಕ ಪ್ರಯೋಜನ ಬರಲಿ ಅಂತ ಹೇಳಿ ತಾವು ಒಂದು ಹುಕುಂ ಮಾಡಿದ್ದೀರಿ. ಕೈಗಾರಿಕೋದ್ಯಮಿಗಳನ್ನು ಆಕರ್ಷಣೆ ಮಾಡುವುದು ಒಂದು ವಿಷಯ. ಮಂತ್ರಿಮಂಡಲ ತನ್ನ ಅಧಿಕಾರವನ್ನು ಬಿಟ್ಟುಕೊಡತಕ್ಕ ತರುಣದಲ್ಲಿ ಯಾವ ಮುಖ್ಯವಾದ ತೀರ್ಮಾನಗಳನ್ನೂ ಕೂಡ ತೆಗೆದುಕೊಳ್ಳಕೂಡದು ಅನ್ನುವುದು ಪ್ರಜಾಪ್ರಭುತ್ವದಲ್ಲಿ ಒಂದು ಸತ್ ಸಂಪ್ರದಾಯ. ಇದು ಎಲ್ಲಾ ದೇಶದಲ್ಲೂ ಇದೆ. ನೀವು ಜನವರಿ ತಿಂಗಳಿನೊಳಗೆ ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುವುದಾಗಲಿ ಅಥವಾ ಅದಕ್ಕೆ ತಕ್ಕ ಭರವಸೆ ಕೊಡುವುದಾಗಲಿ—ಚುನಾವಣೆ ಚಳುವಳಿ ದೇಶದಲ್ಲಿ ಭರದಿಂದ ನಡೆಯುತ್ತಾ ಇದ್ದ ಕಾಲದಲ್ಲಿ ಅಂತಹ ಒಂದು ಆಗತ್ಯ ಏನಿತ್ತು ? ತಾವು ಅವರಿಗೆ ಭರವಸೆ ಕೊಡುವುದರ ಔಚಿತ್ಯ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರ ಯಾವಾಗಲೂ ಶಾಶ್ವತವೇ. ಮಂತ್ರಿ ಮಂಡಲ ಬರಬಹುದು ಹೋಗಬಹುದು. ಆದ್ದರಿಂದ ಯಾರು ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿ ಇದ್ದಾರೋ ಅವರು ಅಲ್ಲಿ ಇರುವವರೆಗೂ ಕೆಲಸ ಮಾಡುತ್ತಲೇ ಇರಬೇಕು. ಆ ರೀತಿ ಮಾಡದೇ ಇದ್ದರೆ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ತಾವು ಹೇಳತಕ್ಕದ್ದು ಅನುಮಾನದಿಂದ ಹೇಳತಕ್ಕ ಮಾತು. ಮೊದಲೇ ಹೇಳಿದ್ದೇನೆ, ಆರು ತಿಂಗಳ ಮುಂದೆಯೇ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ನವೆಂಬರ್‌ನಲ್ಲಿ ಅರ್ಜಿ ಮಾಡಿದಮೇಲೆ ಬೊಂಬಾಯಿಗೆ ಹೋಗಿ ಅವರ ಜೊತೆಯಲ್ಲಿ ಮಾತನಾಡಿದರೆ ಅವರು ನಮಗೆ ಓಟು ಕೊಡುತ್ತಾರೆಯೇ ? ಎರಡನೆಯದು ಇದರಿಂದ ಮನಸ್ಸಿನಲ್ಲಿ ಏನೋ ಒಂದು ಸುಮ್ಮನೆ ಕಳವಳ, ಕುದಿತ, ಅನುಮಾನ. ಯಾವ ಯಾವುದೋ ಭಾವನೆಗಳನ್ನು ಹುಟ್ಟಿಸಿಕೊಂಡು, ಸುಮ್ಮನೆ ಅನುಮಾನ ಮಾಡಿದ್ದೂ ಮಾಡಿದ್ದೆ, ಕೇಳಿದ್ದೂ ಕೇಳಿದ್ದೆ. ಈ ಪ್ರಶ್ನೆಯಲ್ಲಿ ಅರ್ಥವೇ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಸಂಪ್ರದಾಯ ಇದೆಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಂತಹ ಸಂಪ್ರದಾಯ ಇಟ್ಟುಕೊಳ್ಳಲೇಬಾರದು.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಕೃಷ್ಣಾ ಮೇಲ್ದಂಡೆ ಯೋಜನೆಯ ವಿಚಾರವಾಗಿ ತಾವು ಕೇಂದ್ರ ಸರ್ಕಾರದವರೊಡನೆ ವಿಚಾರ ವಿನಿಮಯ ಮಾಡುವಾಗ ನಾಲ್ಕನೆಯ ಯೋಜನೆಯಲ್ಲಿ ಅದನ್ನು ಅಳವಡಿಸಿಲ್ಲ, ಆದಕ್ಕೆ ಬೇರೆ ಹಣವನ್ನು ಒದಗಿಸಿ ಎಂದು ಕೇಳಿದಾಗ ಕೇಂದ್ರದಿಂದ ಯಾವ ಉತ್ತರ ಬಂತು ಮತ್ತು ಒಂದುವೇಳೆ ನಾಲ್ಕನೆ ಯೋಜನೆಯಲ್ಲಿ ಅವರು ನಮಗೆ ಹಣವನ್ನು ಕೊಡದಿದ್ದರೆ ನಾಲ್ಕನೆಯ ಯೋಜನೆಯಲ್ಲಿ ಅದನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ದುಡ್ಡು ಇಲ್ಲದೇ ಹೋದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೇ ಕೇಂದ್ರ ಸರ್ಕಾರದವರನ್ನು ಈಗ ಮೂರು ವರ್ಷದಿಂದ ಸುಮ್ಮನೆ ಒತ್ತಾಯ ಮಾಡುತ್ತಾ ಇದ್ದೇವೆ. ಇದು ಒಟ್ಟು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ, ಇದನ್ನು ಅವರು ತೀರ್ಮಾನ ಮಾಡಿಲ್ಲ. ಬಹುಶಃ ಈ ಸಲ ಹೋದಾಗ ಮುಖ್ಯಮಂತ್ರಿಗಳ ಸಭೆ ಇದೆ. ಆಗ ಒತ್ತಾಯ ಮಾಡಿ ಇದನ್ನು ಮಾಡಿಸಬೇಕಾಗುತ್ತದೆ. ಇದು ಮಾಡಬೇಕಾದ್ದು ಅವಶ್ಯಕ. ಈಗ ಸುಮಾರು 14 ಲಕ್ಷ ಎಕರೆ ನೀರು ಉಣ್ಣತಕ್ಕ ಪ್ರದೇಶ ಇರುತ್ತದೆ. 5 ಅಥವಾ 10 ಕೋಟಿ ರೂಪಾಯಿ ಖರ್ಚು ಮಾಡಿ ತೀವ್ರ ಅನುಕೂಲವಾಗಬೇಕಾದರೆ ಕೇಂದ್ರ ಸರ್ಕಾರದವರ ಸಹಾಯ ಬರಬೇಕು, ಮಾನ್ಯ ಸದಸ್ಯರು ಎಕರೆಗೆ ಮುನ್ನೂರು ರೂಪಾಯಿನಂತೆ ಸಾಲ ಕೊಡಿಸಿದರೆ 6 ವರ್ಷದಲ್ಲಿ ಕಟ್ಟಿಸಿಕೊಡಬಹುದು.

Sri M. Y. Ghorpade.—You have rightly emphasised the great need for adequate production of fertilizer and its proper distribution and you have agreed to give top priority to the idea of setting up a co-operative fertilizer factory in the Hospet Ayacut.

Sri S. Nijalingappa.—That is certainly in our mind.

Mr. Speaker.— I will put the amendments to vote. Instead of reading the amendments and taking 45 minutes for reading, it will be taken as read and it will be recorded like that, these amendments have been read. The amendments have already been circulated to members. While putting the amendments to vote, I will formally mention the name of the member who has moved the particular amendments. The first amendment stands in the name of the Hon'ble Member Sri T. R. Shamanna.

The question is :

"That the amendments 1 to 8 of Sri Shamanna be added at the end of the motion."

The amendments were negatived.

Mr. Speaker.—The question is :

"That the amendments of Sri G. Duggappa be added at the end of the motion."

The amendments were negatived.

Mr. Speaker.—The question is :

"That the Amendments 1 to 5 of Sri H. Siddaveerappa be added at the end of the motion.

The amendments were negatived.

Mr. SPEAKER.—The question is :

"That the amendments 1 to 9 of Sri S. Bangarappa be added at the end of the motion."

The amendments were negatived.

Mr. SPEAKER.—The question is :

"That the amendments 1 to 15 of Sri M. S. Krishnan be added at the end of the motion."

The amendments were negatived.

Mr. SPEAKER. The question is :

"That the amendments 1 to 14, of Sri V. N. Patil be added at the end of the motion."

The amendments were negatived.

Mr. SPEAKER.—The question is :

"That the amendments 1 to 3 of Sri M. H. Jayaprakash Narayan be added at the end of the motion."

The amendments were negatived.

Mr. SPEAKER.—The question is :

"That the amendments 1 to 4 of Sri M. Mallappa be added at the end of the motion."

The amendments were negatived.

Mr. SPEAKER.—The question is :

"That the amendment of Sri H. N. Nanje Gowda be added at the end of the motion."

The amendments were negatived.

Mr. SPEAKER.—The question is :

"That the amendments 1 and 2 of Sri H. M. Channabasappa be added at the end of the motion."

The amendments were negatived.

Mr. SPEAKER.—The question is :

"That the amendments 1 to 5 of Sri S. Sivappa be added at the end of the motion."

The amendments were negatived.

Mr. SPEAKER.—The question is :

"That the amendments 1 to 9, of Sri M. M. Jalisatgi be added at the end of the motion."

The amendments were negatived.

Mr. SPEAKER.—The question is :

"That the amendments 1 to 4 of Sri Digambar Rao Balwant Rao be added at the end of the motion."

The amendments were negatived.

Mr. SPEAKER.—The question is:

"That the amendments 1 to 3 of Sri S. R. Bommai be added at the end of the motion."

The amendments were negatived.

Mr. SPEAKER.—The question is :

"That the amendment of Sri D. S. Nadkarni be added at the end of the motion."

The a mendment was negativeed.

Mr. SPEAKER.—The question is :

"That the amendments 1 to 6, of Sri S. S. Shetter be added at the end of the motion."

The amendment were negatived

Mr. SPEAKER.—The question is :

"That the amendments 1 to 4, of Sri K. H. Patil be added at the end of the motion."

The amendments were negatived.

Mr. SPEAKER.—The question is :

"That the amendments 1 and 2 of Sri P. V. Aithala be added at the end of the motion."

The amendments were negatived.

Mr. SPEAKER.—Sri P. Venkatagiriyappa has not moved his amendments and they will not be put to vote. Now I will put the main motion of Sri Ghorpade to the vote of the House.

The question is

"That we, the Members of the Mysore Legislative Assembly assembled in this session beg leave to thank the Governor for the address delivered to the Members of the Legislature on the 15th March 1961."

The motion was adopted

Mr. SPEAKER.—The House will now adjourn to reassemble at 3-00 P.M.

As directed by the Speaker, the amendments put to vote and negatived are reproduced below :—

Amendments of by Sri T. R. Shamanna :—

The following words shall be added at the end of the motion ' but regret that—

(1) no specific assurance as to how the long-range Bangalore Water Supply scheme is to be completed, though the matter is pending for the last two or thee years ;

(2) the present supply of foodgrains is very bad in quality and supplies are irregular, and prices are abnormally high.

(3) the uniform grant-in-aid rules in respect of technical education institutions is very unfavourable to commerce institutions.

(4) no concrete steps have been taken regarding the removal or improvement of slums in Bangalore City.

(5) the hospital service in Bangalore City is very unsatisfactory.

(6) the family planning has not proved much of a success despite the large sums of money that is being spent.

(7) electricity tariff for domestic consumption is increasing very rapidly and steps should be taken to reduce the same.

(8) plan amounts have not been utilised to the best advantage of people."

Amendments of Sri G. Duggappa :—

The following words shall be added at the end of the motion :

"but regret that. The Council of Ministers have failed—

(1) to take adequate measures for eradicating the evil of untouchability.

(2) to make adequate provision for the progress of scheduled class people in the field of education.

(3) to take steps for the grant of land to landless scheduled class people in the State, especially in the Bhadra Right Bank Channel area in Chitradurga District.

(4) to take adequate measures for the promotion and development of small-scale industries in the State.

(5) to take measures for the utilization of Electric power produced in the State.

(6) to take steps for the proper distribution of water in the Bhadra Right Channel area in Harihar and Davangere Taluks Bank.

(Amendment of Sri G. Duggappa)

(7) to successfully execute the various irrigation schemes under the three Five-Year Plans.''

Amendments of Sri H. Siddaveerappa

The following words shall be added at the end of the motion:

''but regret that—

(1) the Government which was in office during the recent General Elections held in February 1967, misused their office in utilising the official machinery to help them in the Elections.

(2) due to inefficient and ineffective administration, there is lowering of standards in the General Administration causing misery and hardship to the common man.

(3) position of Law and Order is not satisfactory due to the interference of the party in power.

(4) there is no planned dynamic programme to continue the policy of Nationalisation in the Departments of Mininig and Transport.

(5) there is failure in safeguardiug and protecting the basic rural industry—serieulture.''

Amendments of Sri S. Bangarappa :—

ಪ್ರಸ್ತಾವದ ಕೊನೆಯಲ್ಲಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದ್ದು : ಆದರೆ.—

(ಅ) ರಾಜ್ಯವನ್ನು ಕರ್ಣಾಟಕವೆಂದು ಹೆಸರಿಸುವಲ್ಲಿ ಸರ್ಕಾರದವರು ವಿಫಲರಾಗಿರುವುದು;

(ಆ) ಕನ್ನಡವನ್ನು ಆಡಳಿತಭಾಷೆ ಹಾಗೂ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವಲ್ಲಿ ಸರ್ಕಾರದವರು ವಿಫಲರಾಗಿರುವುದು ;

(ಇ) ಭೂಕಂದಾಯವನ್ನು ರದ್ದುಮಾಡಿರುವುದು ;

(ಈ) ಸಣ್ಣ ಹಿಡುವಳಿದಾರರು ಮತ್ತು ಗೇಣಿದಾರರುಗಳಿಗೆ ಆಹಾರಧಾನ್ಯ ವಸೂಲಾತಿಯಲ್ಲಿ ವಿನಾಯಿತಿ ಕೊಡುವಲ್ಲಿ ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ಸರ್ಕಾರ ವಹಿಸಿಕೊಳ್ಳುವಲ್ಲಿ ಬೇಸಾಯಗಾರರಿಂದ ಮಾರುಕಟ್ಟೆ ಬೆಲೆಗಿಂತ ಬಹಳ ಕಡಿಮೆ ಬೆಲೆಯಲ್ಲಿ ಕಡ್ಡಾಯವಾಗಿ ಆಹಾರಧಾನ್ಯಗಳನ್ನು ವಸೂಲ್ಮಾಡುತ್ತಿದ್ದಾಗ್ಯೂ ಪಡಿತರ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡುವಲ್ಲಿ ಹಾಗೂ ಬೇಸಾಯಗಾರರನ್ನು ದೋಚುವ ಮತ್ತು ಕೊಳ್ಳುವವರನ್ನು ಸುಲಿಗೆ ಮಾಡುವ ದ್ವಿಮುಖ ಎತ್ತುವಳಿ ಮತ್ತು ಹಂಚಿಕೆ ನೀತಿಯನ್ನು ಸರಿಪಡಿಸುವಲ್ಲಿ ಸರ್ಕಾರದವರು ವಿಫಲವಾಗಿರುವುದು ;

(ಉ) ಗ್ರಾಮಪಂಚಾಯಿತಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಹೆಚ್ಚು ಅಧಿಕಾರ ಮತ್ತು ಧನಸಹಾಯ ನೀಡಿ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಮೂಲಕ ಪುನರ್ಘಟಿಸುವಲ್ಲಿ ಸರ್ಕಾರದವರು ವಿಫಲರಾಗಿರುವುದು ;

(ಊ) ರಾಜ್ಯದ ಆಡಳಿತದಲ್ಲಿ ಹೆಚ್ಚುತ್ತಿರುವ ಲಂಚಗುಳಿತನ ಸ್ವಜನ ಪಕ್ಷಪಾತ ಮತ್ತು ಅದಕ್ಷತೆಗಳನ್ನು ನಿರ್ಮೂಲ ಮಾಡುವಲ್ಲಿ ಸರ್ಕಾರದವರು ವಿಫಲರಾಗಿರುವುದು ;

(ಋ) ರಾಜ್ಯದಲ್ಲಿ ಹೇರಳವಾಗಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ನೀರಾವರಿ ಹಾಗೂ ಕೈಗಾರಿಕಾಭಿವೃದ್ಧಿಗಳಿಗೆ ಬಳಸಿಕೊಳ್ಳದಿರುವುದು ;

(ೠ) ರಾಜ್ಯದ ಖನಿಜ, ಅರಣ್ಯ ಮತ್ತು ಇತರ ನೈಸರ್ಗಿಕ ಸಂಪತ್ತುಗಳನ್ನು ರಾಜ್ಯದ ಕೃಷಿ ಕೈಗಾರಿಕೆ ಹಾಗೂ ವಾಣಿಜ್ಯಾಭಿವೃದ್ಧಿಗಳಿಗಾಗಿ ಮತ್ತು ಮಲೆನಾಡು ಪ್ರದೇಶಗಳ ಅಭಿವೃದ್ಧಿಗಾಗಿ ಉಪಯೋಗಿಸುವಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡದಿರುವುದು ;

(ಎ) ಇತರ ಅನೇಕ ಪ್ರಾಮುಖ್ಯತೆ ವಿಷಯಗಳ ಬಗ್ಗೆ ಈಗ ಅಧಿಕಾರ ವಹಿಸಿಕೊಂಡಿರುವ ಮಂತ್ರಿ ಮಂಡಲವು ಕಳೆದ ಐದುವರ್ಷಗಳಲ್ಲಿ ನಡೆಸಿದ ಆಡಳಿತಕ್ಕಿಂತ ಯಾವ ವಿಷಯಗಳಲ್ಲಿ ರಾಜ್ಯದ ಹಾಗೂ ಜನತೆಯ ಹಿತಗಳನ್ನು ಸಾಧಿಸುವಲ್ಲಿ ಹೊಸ ಹೆಜ್ಜೆಗಳನ್ನು ಇಡಲು ಆಶಿಸುತ್ತದೆ ಎಂಬ ಬಗ್ಗೆ ತಮ್ಮ ಧ್ಯೇಯೋದ್ದೇಶಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಪಡಿಸದಿರುವುದು—ಇವೆಲ್ಲಾ ಶೋಚನೀಯ ಸಂಗತಿಗಳಾಗಿವೆ.

Amendments of Sri M. S. KRISHNAN.—

The following words shall be added at the end of the motion :

"but regret that the Government have failed to

(1) enunciate a suitable policy in respect of rise in prices of essential commodities of life and foodgrains and the need for taking effective steps to arrest the same;

(2) put down corruption and blackmarketing;

(3) solve the problem of unemployment;

(4) take proper measures for the development of the State in the Industrial field;

(5) enunciate a radical policy in relation to land reforms and the need for abolition of land Revenue;

(6) take measures for reducing the crushing burden of taxes on the common people, such as reduction of water rates in Bangalore, Electricity duty and Surcharges etc;

(7) take adequate measures for giving its rightful place to Kannada language in all spheres of activity including education at the University level;

(8) take measures for getting the Kannada speaking majority areas in the neighbouring States and also to name the State as "Karnataka";

(9) take adequate measures to secure just and equitable distribution of water from inter-State rivers;

(10) reform the police administration;

(11) solve the problems of Non-Gazetted Officers and Government servants;

(12) enunciate a suitable labour policy;

(13) failure to take proper measures for rehabilitating the closed textile establishments in the State;

(Amendment of Sri M. S. KRISHNAN)

(14) enunciate a suitable policy in regard to withdrawal of cases;

(15) protect the democratic rights of the people by superseding the Bangalore City Corporation."

Amendment of Sri V. N. Patil.—

The following words shall be added at the end of the motion :
"But regret that.—

(1) the failure of the Council of Ministers (1) in enunciating a suitable policy in respect of rising prices of food-grains and essential commodities and steps to arrest the same;

(2) to put down corruption and black-marketing;

(3) to solve the problem of unemployment;

(4) to take proper measures for the development of the State in the industrial field;

(5) to enunciate a proper and radical policy in relation to land reforms and the need for abolition of land Revenue;

(6) to take measures for reducing the crushing burden of taxes, surcharge-water cess and electricity duty, etc;

(7) to take adequate measures for giving its rightful place to Kannada language in all fields of activity including education at the University Level;

(8) to take measures for getting Kannada speaking majority areas in the neighbouring States and also to name this State as Karnataka State;

(9) to take adequate measures for the just and equitable distribution of Inter-State River Water;

(10) to reform the Police Administration;

(11) to solve the problem of Non-Gazetted Officers and Govenrnment Servants;

(12) to take steps to bring an uniform educational policy at both Higher Secondary and University level and to abolish capitation fee system;

(13) to take steps in the field of soil cons rvation;

(14) to develop the industrially backward Hyderabad-Karnataka area where not a single worth name industry has come up."

Amendment of Sri M. H. Jayaprakash Narayan :—

The following words shall be added at the end of the motion :

" but regret that.—

(1) there is no mention in the address about development of Scheduled castes and Scheduled Tribes in their Socio-Economic and Educational progress.

(2) there is no mention in the address about the eradication of Untouchability in the rural areas and the steps taken in this behalf.

(3) there is no mention in the address about the constitutional safe-guards and their implementation for the Scheduled Castes, Scheduled Tribes and other weaker Section of the Society in services, in the development of Education facilities, and create minimum programme of Housing, Food and Cloth to the Neglected section of the Society."

Amendment of Sri M. Mallappa :—

The following words shall be added at the end of the motion :

" but regret that.—

(1) definite policy and programme have not been mentioned in the address.

(2) Government have not taken any steps for the development of Malnad area.

(3) the Government have failed to give good administration without party interference.

(4) the Government have not taken any measures to adopt Kannada as the Official language.

Amendment of Sri H. N. Nanje Gowda :—

The following words shall be added at the end of the motion :

" but regret that.—

no mention has been made of Government's efforts to protect the riparian rights of Mysore in the Cauvery basin and that State's interests have been subordinated to personal and vested interests."

Amendment of Sri H. M. Channabasappa:—

The following words shall be added at the end of the motion :

" but regret that—

(1) no mention has been made about the inter-State river-water dispute and that Government has failed to safeguard the Riparian interests of Mysore in the Krishna, Godavari and Cauvery basins.

(Amendment of Sri H. M. Channabasappa)

(2) no mention has been made of the efforts to a rest the growing menace of corruption in administration and that Government has failed to institute a High Level Judicial enquiry into the serious allegations of mal-practices levelled by Members of Legislature against the Ministers and other high placed political persons."

Amendment of Sri S. Sivappa:—

The following words shall be added at the end of the motion :

"but regret that no mention has been made about—

(1) the prevailing corruption in the administration and the effective steps to immediate eradication of the same;

(2) about instituting immediate enquiries to assess the ill-gotten wealth of Ministers, Ex-Ministers and Public men holding public offices since 1947 ;

(3) about the nationalisation of Mining Industry and the basic Industries in the State;

(4) about the steps to be taken to effectively oppose the One Man's Border Commission which has been imposed unilaterally on the people of Mysore;

(5) about the effective steps contemplated by the Government to include known Kannada areas in Mysore State which are now in the other neighbouring States"

Amendment of Sri M. M. Jalisatgi.—

The following words shall be added at the end of the Motion :

"but regret that—

(1) no mention has been made as to the steps taken in several Districts regarding the sinking of irrigation wells particularly in North Kanara District;

(2) no details have been given regarding the steps taken for the procurement of food-grains in the various Districts;

(3) no mention has been made regarding the steps taken for the intensive and extensive cultivation of lands in North Kanara District ;

(4) no mention has been made as to where 11 major and 25 medium Irrigation Projects were taken up for execution especially how many projects were taken up in North Kanara District ;

(5) no mention has been made as to what steps were taken up in Malnad area regarding minor Irrigation schemes ;

(6) no mention has been made as to the concrete steps taken regarding the development of cocanut cultivation in Malnad area ;

(7) no mention has been made regarding implementation of the Indo-Norwagian project nor is it mentioned how much amount has been spent on the said project in North Kanara District ;

(8) no mention has been made regarding the distribution of mechanized boats to fishermen in North Kanara District.

(9) no mention has been made regarding the steps taken for the development of animal husbandry in North Kanara Districts.

Amendment of Sri Digambar Rao Balwant Rao.—

The following words shall be added at the end of the motion :

"but regret that—

(1) the law and order situation in the State has been deteriorating day by day.

(2) that alleged Check-posts and mobile squads have wilfully neglected to effectively improve the Food control orders and preventing smuggling across the State borders.

(3) that no mention has been made for abolition of the Land Revenue immediately.

(4) the very purpose of stabilising the prices of foodgrains to the consumers and essential commodities like cloth. other manufactured goods at reasonable prices to the producers has utterly failed.

Amendment of Sri S. R. Bommai.—

The following words shall be added at the end of the motion :

"but regret that.—

(1) the Council of Ministers have utterly failed to provide proper text-books and they have failed to keep up the Standard of education in this State.

(2) the Council of Ministers have also failed to provide drinking water in most of the villages in the State.

(3) The Council of Ministers have misused their power in suspending many local authorities and in postponing the elections in number of local authorities."

Amendment of Sri D. S. Nadkarni:—

The following words shall be added at the end of the motion :

"but regret that.—

(1) no mention has been made as to how many acres of lands have been brought under rubber plantation in North Kanara District nor is it mentioned as to how many acres of forest lands havs been released for Grow More Food Campaign."

Amendment of Sri S. S. Shetter.—

The following words shall be added at the end of the motion :

"But regret that.—

(1) there is no mention about a uniform policy regarding the supply of foodgrains in all towns ;

(2) there is no mention about the soaring prices and unfair and inequitable distribution of foodgrains ;

(3) there is no mention about the housing problem of labour class and poorer sections of the people;

(4) there is no mention about the slum dwellers in the City area and Sanitation of the towns;

(5) there is no mention about the working conditions of Weaving and Spinning Mills in Mysore State and about the steps taken for the implementation of the existing labour laws"

Amendment of Sri K. H. Patil.—

ಪ್ರಸ್ತಾವದ ಕೊನೆಯಲ್ಲಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದ್ದು.—

ಆದರೆ

"(ಅ) ರಾಜ್ಯದಾದ್ಯಂತ ಸಹಕಾರ ಶಿಕ್ಷಣ ಕೊಡುವ ಬಗೆ, ವ್ಯಯಸಾಯದ ಪ್ರಗತಿಗೆ ಗಮನ ಕೊಡುವ ಬಗ್ಗೆ, ವಿದ್ಯುಚ್ಛಕ್ತಿ ವಿತರಣೆಯ ಬಗ್ಗೆ ಹಾಗೂ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸರಕಾರದವರ ಅದಕ್ಷತೆ."

(ಆ) ಆಡಳಿತದಲ್ಲ ಭ್ರಷ್ಟಾಚಾರ, ಪಕ್ಷಪಾತ ಹಾಗೂ ಅಕ್ರಮ ಹಸ್ತಕ್ಷೇಪಗಳ ಪರಿಣಾಮವಾಗಿ ರಾಜ್ಯದ ಜನತೆಗೆ ಆಗಿರತಕ್ಕ ಅಪಾರಹಾನಿ ;

(ಇ) ಯೋಜನೆಗಳು ನಿಷ್ಪ್ರಯೋಜನ ವಾಗಿರುವುದು.

(ಈ) ಹೊಸ ಯೋಜನೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಸೂಚಿಸದಿರುವದು–ಇವೆಲ್ಲ ಶೋಚನೀಯ ಸಂಗತಿಗಳಾಗಿವೆ"

Amendment of Sri P. V. Aithala :—

The following words shall be added at the end of the Motion :

"But regret that—

(1) no mention has been made therein of the wilful destruction of fertile agricultural lands and merciless eviction of ryots and tenants from their holdings under the guise of requirements for the Harbour Project and formation of an industrial development area in Panambur, Baikampady and neighbouring villages of S. K. District ;

(2) no montion has been made therein that the Government themselves were responsible for the abnormal rise in prices of foodgrains and other essential Commodities by imposing higher rates of tax and penalties under the Mysore Sales Tax Act, 1957"

The House adjourned for recess at Thirty Minutes past Twelve of the Clock and reassembled at Three of the Clock.

[Mr. SPEAKER.—in the Chair]

SUPPLEMENTARY AND ADDITIONAL DEMANDS FOR GRANTS FOR THE YEAR 1966-67 (3rd Instalment)

Sri H. R. ABDUL GAFFAR (Deputy Minister for Finance).—On the recommendation of the Governor, I beg to move :

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Income other than Corporation Tax'."

Mr. SPEAKER.—Motion moved:

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Income other than Corporation Tax'."

Along with this Demand the rest of the Demands are also deemed to have been moved and are before the House for debate.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮ್ಯಾಂಡುಗಳ ಬಗ್ಗೆ ಮಾತನಾಡುವಾಗ ಈ ಸಪ್ಲಿಮೆಂಟರಿ ಡಿಮ್ಯಾಂಡುಗಳು ಪದೇ ಪದೇ ಬರತಕ್ಕಂಥಾದ್ದು ಅಲ್ಲ ಎಂದು ಹೇಳಲಿಚ್ಛಿಸುತ್ತೇನೆ. ಇದು ಈಗ 3ನೇ ಸಾರಿ ಬಂದಿರತಕ್ಕದ್ದು. ಸರ್ಕಾರ ದಕ್ಷರೀತಿಯಲ್ಲಿ ಕೆಲಸವನ್ನು ನಿರ್ವಹಿಸತಕ್ಕ ಯೋಜನೆಯನ್ನು ಮಾಡಿಕೊಂಡು, ಹೋದಸಾರಿ ಬಡ್ಜೆಟ್ ಮಾಡತಕ್ಕ ಕಾಲದಲ್ಲಿ ಸರಿಯಾದ ರೀತಿಯಲ್ಲಿ ಆಲೋಚನೆ ಇಟ್ಟುಕೊಂಡು ಮಾಡಿದ್ದರೋ ಇಲ್ಲವೋ ಎನ್ನುವ ಅನುಮಾನದಿಂದ ಈ ರೀತಿಯಾಗಿ ಪದೇ ಪದೇ ಸಪ್ಲಿಮೆಂಟರಿ ಡಿಮ್ಯಾಂಡುಗಳು ಬಂದಿರುವುದು ಎಂಬುದಾಗಿ ಅರ್ಥವಾಗುತ್ತದೆ. ಪಾರ್ಲಿಮೆಂಟರಿ ಪ್ರೊಸೀಜರ್‌ಗಳಲ್ಲಿ ಅನುಭವಿಗಳೂ ಮೇಧಾವಿಗಳೂ ತಿಳಿಸಿರುವಂತೆ ತುರ್ತು ಪರಿಸ್ಥಿತಿ ಸಮಯದಲ್ಲಿ ಅದರಲ್ಲಿಯೂ ಭಾರಿ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಡಿಮ್ಯಾಂಡುಗಳನ್ನು ಇಡಲೇ ಬೇಕಾದಂಥ ಪರಿಸ್ಥಿತಿ ಬಂದಂಥ ಕಾಲದಲ್ಲಿ ಇಂತಹ ಸಪ್ಲಿಮೆಂಟರಿ ಡಿಮ್ಯಾಂಡುಗಳು ಬರುತ್ತವೆ. ಆದರೆ ಈ ರೀತಿಯಾಗಿ ಪದೇ ಪದೇ ಇಂತಹ ಸಪ್ಲಿಮೆಂಟರಿ ಬೇಡಿಕೆಗಳನ್ನು ತರತಕ್ಕದ್ದು ಒಂದು ಒಳ್ಳೆಯ ಸೂಚನೆಯಲ್ಲ. ಇನ್ನು ವಿವರಗಳಿಗೆ ಹೋಗುವ